ಖಾಸಗಿ ಪ್ರಸಾರ



# ಶ್ರೀದೇವಿ ಅಂತರಂಗ

ಸೇವೆ - ಶಿಕ್ಷಣ - ಅಧ್ಯಾತ್ಮದ ಜೊತೆಗೆ ಪಯಣ

ಮಾಸಪತ್ರಿಕೆ
ಸಂಪುಟ 1, ಸಂಚಿಕೆ 12
ಅಕ್ಟೋಬರ್ 2023

SHRIDEVI ANTARANGA
Monthly Magazine




SHRIDEVI
EDUCATION



**ಪ್ರಧಾನ ಸಂಪಾದಕರ ಅಂತರಂಗ**

ಡಾ. ಎಂ.ಆರ್. ಹುಲಿನಾಯ್ಕರ್
ಸಂಸ್ಥಾಪಕ ಅಧ್ಯಕ್ಷರು
ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಸಮೂಹ

**ಅನೇಕ ನಾಯಕರು ತಮ್ಮ ಭೇದ ಮರೆತು ಸೇರಿದ್ದರು. ಎಲ್ಲರೂ ಸಾಮಾಜಿಕ ನ್ಯಾಯ ಅನುಷ್ಠಾನವಾಗಬೇಕು ಎಂಬ ಆಶಯವನ್ನು ಹೊಂದಿದ್ದುದು ವಿಶೇಷವಾಗಿ ಗುರುತಿಸಬೇಕಾದ ವಿಚಾರವಾಗಿತ್ತು.**

## ಅವಕಾಶವಂಚಿತ ಸಮುದಾಯಗಳ ಅಧ್ಯಯನ ಮತ್ತು ಸಂಘಟನೆ ಅಗತ್ಯ

ಯುವ ಉದ್ಯಮಿ, ಪ್ರಜಾಪ್ರಗತಿ ದಿನಪತ್ರಿಕೆ ಸಹ ಸಂಪಾದಕರೂ ಕಿರಿಯ ಮಿತ್ರರಾದ ಮಧು ನಾಗಣ್ಣ ಅವರು 'ಅಂಕಲ್ ಅಕ್ಟೋಬರ್ 3ರಂದು ಬೆಳಗಾವಿಯಲ್ಲಿ ನಡೆಯುವ 'ಶಫರ್ಡ್ಸ್ ಇಂಡಿಯಾ ಇಂಟರ್‌ನ್ಯಾಷನಲ್'ನ 9ನೆಯ ವಾರ್ಷಿಕ ಅಧಿವೇಶನಕ್ಕೆ ಹೋಗೋಣ' ಎಂದರು. ಈ ಶಫರ್ಡ್ಸ್‌ನ ವಾರ್ಷಿಕ ಸಮ್ಮೇಳನ ಅಕ್ಟೋಬರ್ 3ರಂದು ನಡೆಯುವುದು ಎಂದು ಮೊದಲೇ ನಿರ್ಣಯವಾಗಿತ್ತು. ಈಗಾಗಲೇ ಉತ್ತರ ಪ್ರದೇಶ, ದೆಹಲಿ, ಬಿಹಾರ, ರಾಜಸ್ಥಾನ, ಗುಜರಾತ್, ಆಂಧ್ರ ಪ್ರದೇಶ, ಮಹಾರಾಷ್ಟ್ರ ಮತ್ತು ತೆಲಂಗಾಣಗಳಲ್ಲಿ ಈ ಸಮಾವೇಶ ಯಶಸ್ವಿಯಾಗಿ ಜರುಗಿದೆ.

ಈ ಸಂಘಟನೆಯ  ಸ್ಥಾಪಕರು ಕರ್ನಾಟಕದ ಮಾಜಿ ಸಚಿವರಾದ ಹೆಚ್.ವಿಶ್ವನಾಥ ಹಾಗೂ ಎಂ.ಎಂ.ರೇವಣ್ಣ. ಇಬ್ಬರೂ ಮಾಧ್ಯಮಗಳ ಮೂಲಕ ಈ ಸಮಾವೇಶದ ಬಗ್ಗೆ ಮಾಹಿತಿ ನೀಡುತ್ತಿದ್ದರು.



ಬೆಳಗಾವಿಯಲ್ಲಿ 'ಶಫರ್ಡ್ಸ್ ಇಂಡಿಯಾ ಇಂಟರ್‌ನ್ಯಾಷನಲ್' ಸಮಾವೇಶ ಆಯೋಜಿಸಲು ಸಂಗೊಳ್ಳಿ ರಾಯಣ್ಣ ಪ್ರೇರಣೆಯಾಗಿರಬಹುದು.

ಈ ಸಮ್ಮೇಳನಕ್ಕೆ ಸ್ಥಳೀಯರು ಪ್ರಾಮಾಣಿಕವಾಗಿ ಶ್ರಮಿಸಿರುವುದನ್ನು ಮರೆಯುವಂತಿಲ್ಲ. ಬೆಳಗಾವಿಯ ಜಿಲ್ಲಾ ಕುರುಬರ ಸಂಘದ ಪ್ರಧಾನ ಕಾರ್ಯದರ್ಶಿ ಎಚ್. ಎನ್.ನಸಲಾಪೂರೆ, ತಾಲ್ಲೂಕು ಅಧ್ಯಕ್ಷ ಲಕ್ಷ್ಮಣ ಡಂಗೇರ, ಯುವ ಘಟಕದ ಅಧ್ಯಕ್ಷ ಶಿವ ಮಧಾಯಿ, ರಾಜ್ಯ ಸಂಚಾಲಕರಾದ ವಿನಾಯಕರ ಬನಹಟ್ಟಿ, ಹಾಲುಮತ ಮಹಾಸಭಾದ ಅಧ್ಯಕ್ಷರಾದ ರುದ್ರಣ್ಣ ಗುಳುಗುಲಿ, ಸಂಘಟನಾ ಕಾರ್ಯದರ್ಶಿ ಮಹಾದೇವ ಕವಲಾಪೂರೆ, ನಾಯಕರಾದ ಲಕ್ಷ್ಮಣ ಚಿಂಗೇಳಿ ಮತ್ತು ನ್ಯಾಯವಾದಿ ಎಂ.ಕೆ.ಪೂಜಾರಿ ಮೊದಲಾದವರು ಕಳೆದ ಏಳೆಂಟು ತಿಂಗಳಿಂದ ಇದಕ್ಕಾಗಿ ದುಡಿದಿದ್ದಾರೆ. ಹಿರಿಯರೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರೂ ಆದ ವಿವೇಕರಾವ್ ಪಾಟೀಲ್ ಅವರು ಇದರ ಯಶಸ್ಸಿಗೆ ದುಡಿದಿದ್ದಾರೆ.

ಇದರ ಉದ್ಘಾಟನೆಯನ್ನು ಹರಿಯಾಣದ ರಾಜ್ಯಪಾಲರಾದ ಭಂಡಾರಿ ದತ್ತಾತ್ರೇಯ ನೆರವೇರಿಸಿದರು. ಗೋವಾದ ಮಾಜಿ ಉಪಮುಖ್ಯಮಂತ್ರಿ ಚಂದ್ರಕಾಂತ, ಸಚಿವರಾದ ಎನ್.ಪಿ.ಸಿಂಗ್ ಬಗೇರಾ, ಯುಕುಂಬಿ ಸಿಂಗ್, ಆವಿಕಾಪಾಲ್, ಉಪಾ ಶ್ರೀಚರಣ, ಮಹಾರಾಷ್ಟ್ರದ ಮಾಜಿ ಸಂಸದರಾದ ಡಾ. ವಿಕಾಸ ಮಹಾತ್ಮೆ, ಗುಜರಾತ್‌ನ ಮಾಜಿ ಸಂಸದರಾದ ಸಾಗರ ರಾಯಕ, ಮಹಾದೇವ ಜಾನಕರ, ಆಂಧ್ರಪ್ರದೇಶದ ಮಲ್ಲೇಶ ಮಗ್ಗೆ, ಅನಂತಪುರ ಲೋಕಸಭಾಕ್ಷೇತ್ರದ ಪ್ರತಿನಿಧಿ ಮಾಧವನ್ ಮೊದಲಾದ ಅನೇಕ ಜನಪ್ರತಿನಿಧಿಗಳು ಮತ್ತು ಸಾಮಾನ್ಯಜನರು ದೇಶದ ವಿವಿಧ ಮೂಲೆಯಿಂದ ಆಗಮಿಸಿದ್ದರು.

ಈ ಸಮ್ಮೇಳನದ ವೈಶಿಷ್ಟ್ಯವೆಂದರೆ, ವಿವಿಧ ಸಮುದಾಯದ ಎಲ್ಲಾ ಧುರೀಣರು ಭಾಗವಹಿಸಿದ್ದರು. ಸಚಿವರಾದ ಸತೀಶ ಜಾರಕಿಹೊಳಿ, ಆರ್.ಬಿ.ತಿಮ್ಮಾಪುರ, ಶ್ರೀಮತಿ ಲಕ್ಷ್ಮೀ ಹೆಬ್ಬಾಳ್ಕರ್, ಬೈರತಿ ಸುರೇಶ, ಮಾಜಿ ಉಪಮುಖ್ಯಮಂತ್ರಿ ಮತ್ತು ಶಾಸಕರಾದ ಲಕ್ಷ್ಮಣ ಸವದಿ, ಮಾಜಿ ಸಚಿವರಾದ ಬಂಡೆಪ್ಪ ಕಾಶೆಂಪೂರ ಹೀಗೆ ಅನೇಕ ನಾಯಕರು ತಮ್ಮ ಭೇದ ಮರೆತು ಸೇರಿದ್ದರು. ಎಲ್ಲರೂ ಸಾಮಾಜಿಕ ನ್ಯಾಯ ಅನುಷ್ಠಾನವಾಗಬೇಕು ಎಂಬ ಆಶಯವನ್ನು ಹೊಂದಿದ್ದುದು ವಿಶೇಷವಾಗಿ ಗುರುತಿಸಬೇಕಾದ ವಿಚಾರವಾಗಿತ್ತು.

▶▶ 7ನೇ ಪುಟಕ್ಕೆ...

# ಶ್ರೀದೇವಿ ರಮಣಮಹರ್ಷಿ ಪುರಸ್ಕಾರ -2023

## ಶ್ರೀದೇವಿ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಅಪರೂಪದ ಸಮಾರಂಭ





■ ಪ್ರತ್ಯಕ್ಷ ವರದಿ
ಎನ್. ಭಾರತಿ
ಮೊ.98865 00570

### ಪೂರ್ವಭಾವಿ ಮಾತುಗಳು

ತುಮಕೂರಿನ ಶ್ರೀದೇವಿ ಶಿಕ್ಷಣ ಸಂಸ್ಥೆ ಹಾಗೂ ಶ್ರೀದೇವಿ ಆಸ್ಪತ್ರೆಗಳ ಸ್ಥಾಪನೆಗೆ ಕಾರಣಕರ್ತರಾಗಿರುವ ಡಾ.ಎಂ.ಆರ್.ಹುಲಿನಾಯ್ಕರ್ ಅವರು ರಾಜ್ಯದಲ್ಲಿ ಸಾಹಸಶೀಲರು ಮತ್ತು ಅಧ್ಯಾತ್ಮಜೀವಿಗಳು ಎಂದೇ ಪ್ರಸಿದ್ಧರಾಗಿದ್ದಾರೆ. ಪ್ರಾಮಾಣಿಕವಾದ ದುಡಿಮೆ ಮತ್ತು ಬದ್ಧತೆಯಿಂದಾಗಿ ತುಮಕೂರಿನಲ್ಲಿ ಶ್ರೀದೇವಿ ಶಿಕ್ಷಣ ಸಂಸ್ಥೆಯನ್ನು ಕಟ್ಟಿ ಬೆಳೆಸಿದ್ದಾರೆ. ಡಾ.ಹುಲಿನಾಯ್ಕರ್ ಮತ್ತು ಶ್ರೀಮತಿ



ಶಾಂತಾದುರ್ಗಾದೇವಿ ಹುಲಿನಾಯ್ಕರ್ ಅವರು ದೇವಿಯ ಆರಾಧಕರು.

ನವಲಗುಂದದ ಹುರಕಡ್ಲಿ ಅಜ್ಜ ಅವರಿಂದ ದೇವಿಯ ಪೂಜಾಕೈಂಕರ್ಯವನ್ನು ಪಡೆದ ಡಾ.ಹುಲಿನಾಯ್ಕರ್ ದಂಪತಿ 2020ರ ಫೆಬ್ರುವರಿಯಲ್ಲಿ ಶ್ರೀದೇವಿ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಶ್ರೀ ದುರ್ಗಾಂಬಿಕಾದೇವಿಯನ್ನು ಪ್ರತಿಷ್ಠಾಪನೆ ಮಾಡಿದ್ದಾರೆ. ಕಾಲಾನಂತರ ಶ್ರೀ ಶಂಭುಲಿಂಗೇಶ್ವರ ಸ್ವಾಮಿಯನ್ನು ದೇವಿ ಹಿಂಭಾಗದಲ್ಲಿ ಪ್ರತಿಷ್ಠಾಪನೆ ಮಾಡಿದ್ದಾರೆ. ಅದಕ್ಕೆ ಹೊಂದಿಕೊಂಡಂತೆ ನಾಗರ ಪ್ರತಿಷ್ಠೆಯಾಗಿದೆ.

ಶ್ರೀದೇವಿ ಆಸ್ಪತ್ರೆಯ ಕೇಂದ್ರ ಸ್ಥಾನದಲ್ಲಿ 'ಆರೋಗ್ಯದಾತ ಗಣಪ' ಆಸೀನನಾಗಿದ್ದಾನೆ. ಶ್ರೀದೇವಿ ವೈದ್ಯಕೀಯ ಮತ್ತು ಸಂಶೋಧನಾ ಕಾಲೇಜಿನ ಪ್ರವೇಶದ್ವಾರದ ಎದುರು ಹೊಯ್ಸಳ ಶೈಲಿಯ ಅತ್ಯಂತ ಸುಂದರವಾದ 'ಶ್ರೀ ವಾಗ್ದೇವಿ' ಕುಳಿತಿದ್ದಾಳೆ.

ಶ್ರೀದೇವಿ ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಣ, ವಿಜ್ಞಾನ ಮತ್ತು ಅಧ್ಯಾತ್ಮದ ಮಧುರ ಸಂಗಮವನ್ನು ನೋಡಬಹುದು. ಇಲ್ಲಿನ ಆಸ್ಪತ್ರೆಯಲ್ಲಿರುವ ಹದಿನಾಲ್ಕು ಆಪರೇಷನ್ ಥಿಯೇಟರ್‌ಗಳಲ್ಲಿ ಪ್ರತಿದಿನ ಆಪರೇಷನ್‌ಗಳು ನಿರಂತರವಾಗಿ ನಡೆಯುತ್ತಿರುತ್ತವೆ. ಅಲ್ಲಿಗೆ ಬರುವ ಪೇಷೆಂಟ್ ಮತ್ತು ಅವರ ಸಹಾಯಕರು ಪ್ರತಿನಿತ್ಯ ದೇವಿಯ ದರ್ಶನ ಪಡೆಯುತ್ತಾರೆ.

ಶ್ರೀದೇವಿ ಶಿಕ್ಷಣ ಸಂಸ್ಥೆಯಲ್ಲಿ ಪೂರ್ವ ಪ್ರಾಥಮಿಕದಿಂದ ಹಿಡಿದು ತಾಂತ್ರಿಕ ಶಿಕ್ಷಣಗಳಾದ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಹಾಗೂ ಇತರೆ ಕೋರ್ಸ್‌ಗಳಿದ್ದು ಅದರ ವಿದ್ಯಾರ್ಥಿಗಳು ದೇವಸ್ಥಾನಕ್ಕೆ ಬಂದು ಧ್ಯಾನಸ್ಥರಾಗಿರುವುದನ್ನು ನೋಡಬಹುದು. ಅಲ್ಲಿರುವ ಬೋಧಕ ಸಿಬ್ಬಂದಿಯಲ್ಲೂ ದೈವಶ್ರದ್ಧೆಯನ್ನು ಕಾಣಬಹುದು.

ಶ್ರೀದೇವಿ ಶಿಕ್ಷಣ ಸಂಸ್ಥೆಯನ್ನು ಮಾನವೀಯ ಮೌಲ್ಯಗಳಾದ ಸೇವೆ, ಪ್ರೀತಿ ಮತ್ತು ಭಾವೈಕ್ಯತೆಯ ತತ್ವಗಳಿಗನುಗುಣವಾಗಿ ನಿರ್ಮಿಸಲಾಗಿದೆ.

ಡಾ.ಹುಲಿನಾಯ್ಕರ್ ದಂಪತಿ ಶ್ರೀ ದುರ್ಗಾಂಬಿಕಾದೇವಿ ಪ್ರತಿಷ್ಠಾಪನೆಯ ಸಂದರ್ಭದಲ್ಲಿ, ಸಾಮಾಜಿಕ ಕಾಳಜಿ ಮತ್ತು ಅಧ್ಯಾತ್ಮ ಕ್ಷೇತ್ರದಲ್ಲಿ ಸಾಧನೆ ಮಾಡಿರುವವರಿಗೆ 'ಶ್ರೀದೇವಿ ರಮಣ ಮಹರ್ಷಿ' ಪುರಸ್ಕಾರ ನೀಡಲು ನಿರ್ಧಾರ ಮಾಡಿದರು. ಮೊದಲ ಸಲದ ಪುರಸ್ಕಾರ ಚಳ್ಳಕೆರೆ ತಾಲ್ಲೂಕಿನ ದೊಡ್ಡೇರಿ ಗ್ರಾಮದ ಪೂಜ್ಯ ಶ್ರೀ ಸತ್–ಉಪಾಸಿ ಅವರಿಗೂ, ದ್ವಿತೀಯ ವರ್ಷದ ಪುರಸ್ಕಾರವನ್ನು ಸತ್ಸಂಗ ಫೌಂಡೇಷನ್ ಸ್ಥಾಪಕರೂ, ಮಹಾನ್ ಯೋಗಿ ಎಂದೇ ಪ್ರಸಿದ್ಧರಾಗಿರುವ ಶ್ರೀ.ಎಂ ಅವರಿಗೂ ಮತ್ತು ತೃತೀಯ ಸಲದ ಪುರಸ್ಕಾರವನ್ನು ಬೆಂಗಳೂರಿನ ಸುವರ್ಣಮುಖಿ ಸಂಸ್ಕೃತಿಧಾಮದ ಆಚಾರ್ಯ ಡಾ.ಎಂ.ನಾಗರಾಜ್ ಅವರಿಗೂ ಪ್ರದಾನ ಮಾಡಲಾಗಿದೆ.

2023ನೆಯ ಸಾಲಿನ ಶ್ರೀದೇವಿ ರಮಣಮಹರ್ಷಿ ಪುರಸ್ಕಾರವನ್ನು ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ ಅವರಿಗೆ ಪ್ರದಾನ ಮಾಡಲಾಯಿತು.

ದಿನಾಂಕ 30.9.2023ರಂದು ತುಮಕೂರಿನ ಶ್ರೀದೇವಿ ಶಿಕ್ಷಣ ಸಂಸ್ಥೆಯ ಸಭಾಂಗಣದಲ್ಲಿ ವರ್ಣರಂಜಿತವಾಗಿ ನಡೆದ ಸಮಾರಂಭದ ಸಾಕ್ಷಾತ್ ವರದಿ.

**ಶ್ರೀದೇವಿ ರಮಣಮಹರ್ಷಿ ಪುರಸ್ಕಾರ ಪ್ರದಾನ**
**ಮತ್ತಷ್ಟು ವರದಿಗಳು: ಪುಟ 4,5,6**

# ಶ್ರೀದೇವಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಪ್ರಥಮ ವರ್ಷದ ಡಿಪ್ಲೋಮ ವಿದ್ಯಾರ್ಥಿಗಳಿಗೆ ಸ್ವಾಗತ

"ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ಜೀವನದಲ್ಲಿ ಆತ್ಮವಿಶ್ವಾಸ, ಕೌಶಲ, ಶ್ರದ್ಧೆ, ಸಮಯಪ್ರಜ್ಞೆಗಳನ್ನು ಕಲಿತರೆ, ಅದರಿಂದ ಅವರು ಜೀವನದಲ್ಲಿ ಅಪೂರ್ವ ಯಶಸ್ಸು ಸಾಧಿಸಬಹುದು. ಜೊತೆಗೆ ಶೈಕ್ಷಣಿಕವಾಗಿಯೂ ಉತ್ತಮ ಸಾಧನೆ ಮಾಡಬಹುದು. ಅದರ ಸಹಾಯದಿಂದ ವಿದ್ಯಾರ್ಥಿಗಳು ಸುಲಭವಾಗಿ ಉದ್ಯೋಗವನ್ನು ಪಡೆಯಲು ಸಾಧ್ಯವಾಗುತ್ತದೆ. ಕಳೆದ 20–25 ವರ್ಷಗಳಲ್ಲಿ ತಾಂತ್ರಿಕ ಶಿಕ್ಷಣದಲ್ಲಿ ದೊಡ್ಡ ಬದಲಾವಣೆಯಾಗಿದೆ. ಜಗತ್ತಿನ ಅನೇಕ ಮಹತ್ವದ ನಿರ್ಧಾರಗಳಲ್ಲಿ ಭಾರತವು ತನ್ನ ಕೊಡುಗೆ ನೀಡಲು ಸಾಧ್ಯವಾಗಿದೆ. ಅದಕ್ಕೆ ಕಾರಣ ಇಂದಿನ ಯುವಶಕ್ತಿ. ಶಿಕ್ಷಣ ಎಂಬುದು ಮನುಷ್ಯನ ಬದುಕಿಗೆ ಮೌಲ್ಯ ತಂದುಕೊಡುವ ಸಾಧನ. ವಿದ್ಯಾರ್ಥಿಗಳು ಶ್ರದ್ಧೆಯಿಂದ ಡಿಪ್ಲೋಮ ತರಗತಿಗಳಲ್ಲಿ ವ್ಯಾಸಂಗ ಮಾಡಿದರೆ ಮುಂದೆ ಬಿ.ಇ, ಎಂ.ಟೆಕ್ ಪದವಿಗಳನ್ನು ಗಳಿಸಲು ಅವಕಾಶವಿದೆ. ನಿಮ್ಮನ್ನು ನೀವು ಶೈಕ್ಷಣಿಕ ಕ್ಷೇತ್ರದಲ್ಲಿ ಸಕ್ರಿಯವಾಗಿ ತೊಡಗಿಸಿ ಕೊಂಡರೆ, ನಿಮ್ಮ ಕುಟುಂಬ, ಶಿಕ್ಷಣ ಸಂಸ್ಥೆ ಮತ್ತು ಸಮಾಜಕ್ಕೆ ಒಳಿತು ಆಗುತ್ತದೆ" ಎಂದು ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್ ಅವರು ಶ್ರೀದೇವಿ ಪಾಲಿಟೆಕ್ನಿಕ್ ಕಾಲೇಜಿನ ವತಿಯಿಂದ ಇತ್ತೀಚೆಗೆ ಪ್ರಥಮ ವರ್ಷದ ಡಿಪ್ಲೋಮ ವಿದ್ಯಾರ್ಥಿಗಳಿಗೆ ತರಗತಿ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ತಿಳಿಸಿದರು.

ಕಾರ್ಯಕ್ರಮದ ಮುಖ್ಯಅತಿಥಿಗಳಾಗಿ ಆಗಮಿಸಿದ್ದ ಕರ್ನಾಟಕ ರಾಜ್ಯ ಮಾಲಿನ್ಯ




ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್, ಬಿ.ಸಿ.ಶಿವಮೂರ್ತಿ, ಪಲ್ಲವಿ, ಎಂ.ಎಸ್.ಪಾಟೀಲ್, ಡಾ.ನರೇಂದ್ರ ವಿಶ್ವನಾಥ್, ಡಾ.ಕೆ.ಎಸ್.ರಾಮಕೃಷ್ಣ, ಡಾ.ಬಿ.ಎಸ್.ಲೋಕೇಶ್, ಪ್ರೊ.ಟಿ.ವಿ.ಬ್ರಹ್ಮದೇವಯ್ಯ, ಮತ್ತು ಪ್ರೊ.ಟಿ.ಎಂ.ಪ್ರವೀಣ್‌ಕುಮಾರ್

ನಿಯಂತ್ರಣ ಮಂಡಳಿಯ ಪರಿಸರ ಅಧಿಕಾರಿಯಾದ ಬಿ.ಸಿ.ಶಿವಮೂರ್ತಿರವರು "ಪ್ರತಿವರ್ಷವೂ ಇಂಜಿನಿಯರಿಂಗ್‌ನಿಂದ ಸುಮಾರು 35,000 ವಿದ್ಯಾರ್ಥಿಗಳು ಹೊರಬರುತ್ತಿದ್ದಾರೆ. ತುಮಕೂರು ಜಿಲ್ಲೆಯಲ್ಲಿಯೇ ಸಾಕಷ್ಟು ಕಂಪನಿಗಳಿದ್ದು, ನಿಮಗೆ ಒಳ್ಳೆಯ ಅವಕಾಶ ಸಿಗುತ್ತಿದೆ. ವಿದ್ಯಾರ್ಥಿಗಳು ತಾವು ವಿದ್ಯಾಭ್ಯಾಸ ಮಾಡಿದ ಕಾಲೇಜು ಹಾಗೂ ಪೋಷಕರಿಗೆ ಒಳ್ಳೆಯ ಹೆಸರು ತರಬೇಕು. ಶ್ರೀದೇವಿ ಸಂಸ್ಥೆಯ ವಿದ್ಯಾರ್ಥಿಗಳು ರಾಜ್ಯ, ದೇಶ ಮತ್ತು ವಿಶ್ವಕ್ಕೆ ಒಳ್ಳೆಯ ಹೆಸರನ್ನು ತಂದರೆ ಅದೇ ನೀವು ಸಂಸ್ಥೆಗೆ ಕೊಡುವ ಮಹತ್ವದ ಕೊಡುಗೆ" ಎಂದರು.

ಇದೇ ಸಂದರ್ಭದಲ್ಲಿ, ಉಪಪರಿಸರ ಅಧಿಕಾರಿಯಾದ ಪಲ್ಲವಿ ಅವರು ಮಾತನಾಡುತ್ತಾ "ವಿದ್ಯಾರ್ಥಿಗಳು ಉತ್ತಮ ವಿದ್ಯಾಭ್ಯಾಸ ಮಾಡಿದರೆ ಉತ್ತಮ ಜೀವನದ ಶಿಖರಕ್ಕೆ ಏರಬಹುದು. ಇಂದು ಉದ್ಯೋಗ ಕ್ಷೇತ್ರದಲ್ಲಿ ಅನೇಕ ಕಂಪನಿಗಳು ಬಹಳಷ್ಟು ಡಿಪ್ಲೋಮ ವಿದ್ಯಾರ್ಥಿಗಳನ್ನು ನೇಮಕ ಮಾಡಿಕೊಳ್ಳುತ್ತಿದ್ದಾರೆ. ಅದರ ಉಪಯೋಗವನ್ನು ನೀವುಗಳು ಪಡೆದುಕೊಳ್ಳಬೇಕು" ಎಂದು ಅರ್ಥಪೂರ್ಣವಾಗಿ ಹೇಳಿದರು.

ಶ್ರೀದೇವಿ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್. ಪಾಟೀಲ್ ಅವರು "ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಡಿಪ್ಲೋಮ ಕೋರ್ಸ್ ಅತ್ಯಗತ್ಯವಾಗಿದೆ. ಡಿಪ್ಲೋಮ ವಿದ್ಯಾರ್ಥಿಗಳಿಗೆ ಕೋರ್ಸ್ ಮುಗಿಯುವ ಮೊದಲೇ ಉದ್ಯೋಗಾವಕಾಶ ಲಭಿಸುತ್ತದೆ. ಉತ್ತಮ ಫಲಿತಾಂಶ ಪಡೆದವರು ಉದ್ಯೋಗವನ್ನು ಸುಲಭವಾಗಿ ಪಡೆಯಲು ಸಾಧ್ಯವಾಗುತ್ತದೆ" ಎಂದರು. ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಡಾ.ನರೇಂದ್ರ ವಿಶ್ವನಾಥ್‌ರವರು ಮಾತನಾಡುತ್ತಾ "ಮೂರು ವರ್ಷಗಳ ಕಠಿಣ ಪರಿಶ್ರಮದಿಂದ ಮುಂದಿನ 30 ವರ್ಷಗಳ ಕಾಲ ಸುಖವಾಗಿ ಜೀವನ ನಡೆಸಬಹುದು" ಎಂದರು. "ವಿದ್ಯಾರ್ಥಿಗಳು ಉಜ್ವಲ ಭವಿಷ್ಯವನ್ನು ರೂಪಿಸಿಕೊಳ್ಳಲು ಏನನ್ನಾದರೂ ಸಾಧಿಸಬೇಕು ಎನ್ನುವ ಛಲ ಅಗತ್ಯ" ಎಂದು ಶ್ರೀದೇವಿ ವೈದ್ಯಕೀಯ ನಿರ್ದೇಶಕರಾದ ಡಾ.ಲಾವಣ್ಯ ಎಂ. ಹುಲಿನಾಯ್ಕರ್ ಅಭಿಪ್ರಾಯಪಡುತ್ತಾ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ಶ್ರೀದೇವಿ ಎಂ.ಬಿ.ಎ. ವಿಭಾಗದ ಮುಖ್ಯಸ್ಥರಾದ ಡಾ.ಕೆ.ಎಸ್. ರಾಮಕೃಷ್ಣ ಭಾಗವಹಿಸಿದ್ದರು. ಶ್ರೀದೇವಿ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಎಸ್.ಲೋಕೇಶ್‌ರವರು ಸ್ವಾಗತವನ್ನು ಕೋರಿದರು.

■ ವರದಿ: ಎನ್.ಆನಂದ




## ಮೊದಲ ವರ್ಷದ ಎಂ.ಬಿ.ಬಿ.ಎಸ್. ವಿದ್ಯಾರ್ಥಿಗಳಿಗೆ ಸ್ವಾಗತ

ನಗರದ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯ ವತಿಯಿಂದ ಸೆ.05ರಂದು ಶ್ರೀದೇವಿ ಆಸ್ಪತ್ರೆಯ ಆಡಿಟೋರಿಯಂ ಸಭಾಂಗಣದಲ್ಲಿ ನೂತನವಾಗಿ ಪ್ರವೇಶ ಪಡೆದಿರುವ 2023–24 ನೇ ಸಾಲಿನ ಪ್ರಥಮ ವರ್ಷದ ವೈದ್ಯಕೀಯ ವಿದ್ಯಾರ್ಥಿಗಳಿಗೆ ವೈದ್ಯ ವೃತ್ತಿಯ ಸಂಕೇತವಾಗಿರುವ ಬಿಳಿ ವರ್ಣದ ಸಮವಸ್ತ್ರಧಾರಣೆ (White Coat Ceremony) ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು. ಚಿತ್ರದಲ್ಲಿ ತುಮಕೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾದ ಕೆ.ವಿ.ಅಶೋಕ್, ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್, ಶ್ರೀದೇವಿ ವೈದ್ಯಕೀಯ ಕಾಲೇಜಿನ ನಿರ್ದೇಶಕರಾದ ಡಾ.ರಮಣ್ ಆರ್ ಹುಲಿನಾಯ್ಕರ್, ಮಾನವ ಸಂಪನ್ಮೂಲ ಮತ್ತು ಮಾಹಿತಿ ತಂತ್ರಜ್ಞಾನ ನಿರ್ದೇಶಕರಾದ ಎಂ.ಎಸ್.ಪಾಟೀಲ್, ಶ್ರೀದೇವಿ ವೈದ್ಯಕೀಯ ಪ್ರಾಂಶುಪಾಲರಾದ ಡಾ.ಎಂ. ಎಲ್.ಹರೇಂದ್ರಕುಮಾರ್, ಶೈಕಣಿಕ ವಿಭಾಗದ ಉಪಪ್ರಾಂಶುಪಾಲರಾದ ಡಾ.ರೇಖಾಗುರುಮೂರ್ತಿ, ಆಡಳಿತ ವಿಭಾಗದ ಉಪಪ್ರಾಂಶುಪಾಲರಾದ ಡಾ.ಹೇಮಂತ್‌ರಾಜ್, ಶ್ರೀದೇವಿ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ.ಕೆ. ಮೋಹನ್‌ಕುಮಾರ್, ಪ್ರಾಧ್ಯಾಪಕರು, ಗ್ಯಾಸ್ಟ್ರೋ ಎಂಟಾರಾಲಜಿ ಸರ್ಜನ್‌ರಾದ ಡಾ.ಎಂ.ಮನೋನ್ಮಣಿ ಮತ್ತು ಜೀವ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ಟಿ.ಜೆ.ಸತೀಶ್ ಅವರುಗಳಿದ್ದಾರೆ.

# ಶ್ರೀದೇವಿ ಔಷಧ ವಿಜ್ಞಾನ ಕಾಲೇಜಿನಲ್ಲಿ ವಿಶ್ವ ಔಷಧಿ ತಜ್ಞರ ದಿನ

"ವೈದ್ಯಕೀಯ ಕ್ಷೇತ್ರದಲ್ಲಿ ಔಷಧಿಕಾರರ ಸೇವೆ ಅನನ್ಯವಾದದ್ದು, ವಿವಿಧ ರೋಗಗಳ ವಿರುದ್ಧ ಪರಿಣಾಮಕಾರಿ ಔಷಧ ಕಂಡು ಹಿಡಿದು ರೋಗಿಗಳಿಗೆ ಸೂಕ್ತ ಚಿಕಿತ್ಸೆ ನೀಡುವಲ್ಲಿ ಮಹತ್ವದ ಪಾತ್ರ ವಹಿಸುತ್ತಾರೆ. ವೈದ್ಯರು ಮತ್ತು ರೋಗಿಗಳ ನಡುವೆ ಸೇತುವೆಯಾಗಿ ಔಷಧಿಕಾರರು ಕೆಲಸ ಮಾಡುತ್ತಾರೆ. ಪ್ರತಿ ವರ್ಷವು ಸೆ.25 ರಂದು ವಿಶ್ವ ಔಷಧಿಕಾರರ ದಿನವನ್ನು ಆಚರಿಸಲಾಗುವುದು. ಇಂಟರ್‌ನ್ಯಾಷನಲ್ ಫಾರ್ಮಸಿಟಿಕಲ್ ಫೆಡರೇಷನ್ (ಎಫ್.ಐ.ಪಿ) ವಿಶ್ವ ಫಾರ್ಮಾಸಿಸ್ಟ್ ದಿನವನ್ನು ಆರಂಭಿಸಿದೆ. ಈ ದಿನದಂದು ಎಫ್.ಐ.ಪಿ.ಅನ್ನು 1912 ರಲ್ಲಿ ಸ್ಥಾಪಿಸಲಾಯಿತು. ರೋಗಿಗಳಿಗೆ ಔಷಧವನ್ನು ಸರಿಯಾದ ಸಮಯಕ್ಕೆ ಒದಗಿಸುವ ವ್ಯವಸ್ಥೆ ಮಾಡಲಾಗಿದೆ" ಎಂದು ತುಮಕೂರು ಪ್ರಾದೇಶಿಕ ಔಷಧ ನಿಯಂತ್ರಣ ಕಚೇರಿಯ ಸಹಾಯಕ ಔಷಧ ನಿಯಂತ್ರಕಿಯಾದ ಶ್ರೀಮತಿ ನೀಲಿಯಾ ಕೊಟ್ಟನ್‌ರವರು ತಿಳಿಸಿದರು.

ಶ್ರೀದೇವಿ ಔಷಧ ವಿಜ್ಞಾನ ಮಹಾವಿದ್ಯಾಲಯ ವತಿಯಿಂದ 'ವಿಶ್ವ ಫಾರ್ಮಾಸಿಸ್ಟ್ ದಿನಾಚರಣೆಯನ್ನು' ಸೆ.25 ರಂದು ಸೋಮವಾರ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್, ಶ್ರೀದೇವಿ ವೈದ್ಯಕೀಯ ನಿರ್ದೇಶಕರಾದ ಡಾ.ರಮಣ್ ಎಂ ಹುಲಿನಾಯ್ಕರ್, ಡಾ.ಲಾವಣ್ಯ ಅವರುಗಳು ಭಾಗವಹಿಸಿ ಔಷಧ ವಿಜ್ಞಾನ ತಜ್ಞರಿಗೆ ಶುಭ ಹಾರೈಸಿದರು.

ಇದೇ ಸಂದರ್ಭದಲ್ಲಿ ಶ್ರೀದೇವಿ ಔಷಧ ವಿಜ್ಞಾನ ಮಹಾವಿದ್ಯಾಲಯ ಜಾಗೃತಿ ಜಾಥಾ ಕಾರ್ಯಕ್ರಮದಲ್ಲಿ ಎಂ.ಎಸ್. ಪಾಟೀಲ್‌ರವರು ಮಾತನಾಡುತ್ತಾ "ಭಾರತೀಯ ಔಷಧಿ ಮಾರುಕಟ್ಟೆ ಜಗತ್ತಿನಲ್ಲಿಯೇ 2ನೇ ರಫ್ತುದಾರ ದೇಶವಾಗಿದ್ದು, ಅದು ನಮ್ಮ ದೇಶಕ್ಕೆ ಬಿಲಿಯನ್ ಡಾಲರ್ ಜಿ.ಡಿ.ಪಿ.ಯನ್ನು ಒದಗಿಸುತ್ತದೆ. ಕರೋನಾ ವಾಕ್ಸಿನ್ ಅತಿ ಕಡಿಮೆ ಬೆಲೆ ಮತ್ತು ಉತ್ಕೃಷ್ಟ ಗುಣಮಟ್ಟದ ಚುಚ್ಚುಮದ್ದು ಎಂದು ತಜ್ಞರಿಂದ ಪರಿಗಣಿತವಾಗಿದೆ. ಅದರಿಂದ ಕರೋನಾ ಮಹಾಮಾರಿಯನ್ನು ಹೋಗಲಾಡಿಸಲು ಸಹಾಯವಾಯಿತು. ತನಗಷ್ಟೇ ಅಲ್ಲದೆ ಇತರ ದೇಶಗಳಿಗೂ ಕರೋನಾ ವಾಕ್ಸಿನ್‌ನ್ನು ಕೊಟ್ಟು ಲಕ್ಷಾಂತರ ಜನರ ಜೀವವನ್ನು ಕಾಪಾಡಿದ ಕೀರ್ತಿ ನಮ್ಮ ದೇಶಕ್ಕಿದೆ" ಎಂದು ಹೇಳಿದರು.

ಶ್ರೀದೇವಿ ಔಷಧ ವಿಜ್ಞಾನ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ಎಸ್.ಜೆ.ಶಂಕರ್‌ರವರು "ಉತ್ತಮ ಗುಣಮಟ್ಟದ ಔಷಧಿಗಳನ್ನು ತಯಾರಿಸುವ ಘಟಕಗಳು ಹೆಚ್ಚು ಜವಾಬ್ದಾರಿಯನ್ನು ವಹಿಸಿಕೊಂಡು ತೃಪ್ತಿದಾಯಕವಾಗಿ ಅತ್ಯುನ್ನತ ಗುಣಮಟ್ಟದ ಔಷಧಿಗಳು ಲಭ್ಯವಾಗುವಂತೆ ಮಾಡುವ ಕೆಲಸವಾಗಬೇಕಾಗಿದೆ. ಔಷಧಶಾಸ್ತ್ರ ತರಬೇತಿ ಹೊಂದಿದ ತಂತ್ರಜ್ಞಾನ ತಜ್ಞರ ಅವಶ್ಯಕತೆ ಇದೆ. ದೇಶಕ್ಕೆ ಹೆಚ್ಚು ಹೆಚ್ಚು ಫಾರ್ಮಾಸಿಸ್ಟ್‌ಗಳು ಬೇಕಾಗಿರುತ್ತಾರೆ. ಈ ನಿಟ್ಟಿನಲ್ಲಿ ಶ್ರೀದೇವಿ ಔಷಧ ವಿಜ್ಞಾನ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಗೆ ಉತ್ತಮ ಬೋಧಕರು ದೊರೆಯುತ್ತಿದ್ದಾರೆ" ಎಂದರು.

ವಿಶ್ವ ಫಾರ್ಮಾಸಿಸ್ಟ್ ದಿನಾಚರಣೆಯ ಅಂಗವಾಗಿ ಸಾರ್ವಜನಿಕರಿಗೆ ಭಿತ್ತಿಪತ್ರವನ್ನು ವಿತರಿಸಲಾಯಿತು.




ತುಮಕೂರು ಪ್ರಾದೇಶಿಕ ಔಷಧ ನಿಯಂತ್ರಣ ಕಚೇರಿಯ ಸಹಾಯಕ ಔಷಧ ನಿಯಂತ್ರಕಿಯಾದ ನೀಲಿಯಾ ಕೊಟ್ಟನ್, ಶ್ರೀದೇವಿ ವೈದ್ಯಕೀಯ ನಿರ್ದೇಶಕರಾದ ಡಾ.ರಮಣ್ ಎಂ ಹುಲಿನಾಯ್ಕರ್, ನೇತ್ರತಜ್ಞರಾದ ಡಾ.ಲಾವಣ್ಯ, ಶ್ರೀದೇವಿ ಔಷಧ ವಿಜ್ಞಾನ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ಎಸ್.ಜೆ.ಶಂಕರ್, ಬಿ.ಸುರೇಶ್, ಎನ್.ಎಸ್.ಅನಂತ್, ಎನ್.ಎಸ್.ಪಂಡಿತ್ ಜವಾಹರ್, ಶ್ರೀದೇವಿ ಸಂಸ್ಥೆಯ ಆಡಳಿತಾಧಿಕಾರಿಯಾದ ಟಿ.ವಿ.ಬ್ರಹ್ಮದೇವಯ್ಯ, ಡಾ.ಬಿ.ಗೋಪಾಲಕೃಷ್ಣ, ಡಾ.ಅರ್ಪಿತಾ ಹಾಗೂ ಪ್ರೊ.ರಮೇಶ್.

ಪತ್ರಿಕೆಯ ಬಳಗ

ಪ್ರಧಾನ ಸಂಪಾದಕರು
ಡಾ. ಎಂ. ಆರ್. ಹುಲಿನಾಯ್ಕರ್

ಗೌರವ ಸಂಪಾದಕರು
ಡಾ. ಕೆ.ಆರ್.ಕಮಲೇಶ

ಕಾರ್ಯನಿರ್ವಾಹಕ ಸಂಪಾದಕರು
ಡಾ. ರಮಣ ಎಂ. ಹುಲಿನಾಯ್ಕರ್

ಸಂಪಾದಕರು
ಅಂಬಿಕಾ ಎಂ. ಹುಲಿನಾಯ್ಕರ್

ಸಂಯೋಜಕ ಸಂಪಾದಕರು
ಎಂ.ಎಸ್.ಪಾಟೀಲ್

ಸಲಹಾ ಸಂಪಾದಕರು
ಎನ್.ಭಾರತಿ

ಸಂಪಾದಕ ಮಂಡಲಿ
ಡಾ. ಭವಾನಿ ಸ್ಟಾಲಿನ್
ಡಾ. ಮನೋನ್ಮಣಿ ಎಂ.ಎಚ್
ಡಾ. ಲಾವಣ್ಯ ರಮಣ

ಸಹಾಯಕ ಸಂಪಾದಕರು: ಎನ್. ಆನಂದ ಪುಟ ವಿನ್ಯಾಸ: ಸುಮಾ ಸಾಗರ್

■ ವಿಶೇಷ ಲೇಖನ



■ ಡಾ. ಟಿ.ಎಸ್. ಭೀಮರಾಜು
ಪ್ರಾಧ್ಯಾಪಕರು,
ಮನೋವೈದ್ಯಶಾಸ್ತ್ರ ನರ್ಸಿಂಗ್
ಶ್ರೀದೇವಿ ನರ್ಸಿಂಗ್ ಕಾಲೇಜ್

# ಶಾಲಾ ಮಕ್ಕಳಲ್ಲಿ ಆತಂಕ ಮತ್ತು ಖಿನ್ನತೆ



ಇಂದಿನ ದಿನಗಳಲ್ಲಿ ಆತಂಕ ಮತ್ತು ಖಿನ್ನತೆ ಎಂಬುದು ಶಾಲಾ ಮಕ್ಕಳಲ್ಲಿ ಸರ್ವೇಸಾಮಾನ್ಯವಾಗಿಬಿಟ್ಟಿದೆ. ಒತ್ತಡದ ಪರಿಸ್ಥಿತಿ, ಶಾಲೆ, ಶಿಕ್ಷಕರು, ಸ್ನೇಹಿತರು, ನೆರೆಹೊರೆಯವರು, ಪೋಷಕರು, ತಂತ್ರಜ್ಞಾನ, ಸ್ಪರ್ಧೆ, ಶೈಕ್ಷಣಿಕಹೊರೆ, ಪೈಪೋಟಿ ಮತ್ತು ಸವಾಲಿನ ವಾತಾವರಣಗಳಿಂದಾಗಿ ಮಕ್ಕಳ ಮುಖದಲ್ಲಿ ನಗು ಮಾಯವಾಗಿ ದುಗುಡ ಎದ್ದು ಕಾಣುತ್ತಿದೆ.

ಆಧುನೀಕರಣ, ತಂತ್ರಜ್ಞಾನ, ಹೆಚ್ಚಿದ ಸ್ಪರ್ಧೆ ಮತ್ತು ಆಕಾಂಕ್ಷೆಗಳಿಂದಾಗಿ ಮಕ್ಕಳಲ್ಲಿ ಆತಂಕದ ಮಟ್ಟವು ಕ್ರಮೇಣ ಹೆಚ್ಚುತ್ತಿದೆ. ಇಂತಹ ಸಂದರ್ಭದಲ್ಲಿ ಶ್ರೀದೇವಿ ಸಂಸ್ಥೆಯಲ್ಲಿ ವ್ಯಾಸಂಗ ಮಾಡುವ ಮಕ್ಕಳಿಗೆ ಖಿನ್ನತೆ ಕಡಿಮೆಯಾಗಲು ಬೇಕಾದ ಒಳಾಂಗಣ ಮತ್ತು ಹೊರಾಂಗಣದ ಕ್ರೀಡೆಗಳು, ಸ್ನೇಹಶೀಲ ಅಧ್ಯಾಪಕರು, ಮನರಂಜನೆ, ಉತ್ತಮ ಪರಿಸರ ಹಾಗೂ ಇತರೆ ಎಲ್ಲಾ ಸವಲತ್ತುಗಳನ್ನು ಕಲ್ಪಿಸುವುದರ ಮೂಲಕ ಅತ್ಯುತ್ತಮ ಶೈಕ್ಷಣಿಕ ವಾತಾವರಣವನ್ನು ನಿರ್ಮಿಸಲು ಪ್ರಯತ್ನ ಮಾಡಲಾಗುತ್ತಿದೆ.

ಆತಂಕದ ಸ್ಥಿತಿ ಮಾನಸಿಕ ಅಸ್ವಸ್ಥತೆಯ ಭಾಗವಾಗಿರುತ್ತದೆ, ಆತಂಕ ಮತ್ತು ಭಯ ಅನಿಯಂತ್ರಿತ ಭಾವನೆಗಳಿಂದ ಜನಿಸುತ್ತವೆ. ಇದರಿಂದಾಗಿ ಮಕ್ಕಳಲ್ಲಿ ಸಾಮಾಜಿಕ ಮತ್ತು ವೈಯಕ್ತಿಕ ಸಾಮರ್ಥ್ಯ ಗಮನಾರ್ಹವಾಗಿ ದುರ್ಬಲಗೊಳ್ಳುತ್ತದೆ. ಮಕ್ಕಳು ಶಾಲೆಗೆ ಹೋಗಲು ಪ್ರಾರಂಭಿಸಿದ ಕಾಲಕ್ಕೆ ಪರಿಸ್ಥಿತಿ, ಸನ್ನಿವೇಶ, ಸ್ಥಳ, ಯಾವುದೇ ವ್ಯಕ್ತಿಯ ಬಗ್ಗೆ ಭಯ, ತಳಮಳ, ಚಿಂತೆ ಅಥವಾ ಯಾವುದೇ ರೀತಿಯ ಆತಂಕವನ್ನು ಅನುಭವಿಸುತ್ತಾರೆ. ಉದಾಹರಣೆಗೆ, ಮಕ್ಕಳು ಶಾಲೆ ಅಥವಾ ನರ್ಸರಿಗೆ ಹೊರಡುವ ಪ್ರಾರಂಭದಲ್ಲಿ ಅವರಲ್ಲಿ ಆತಂಕ, ಭಯ, ಕಿರಿಕಿರಿ, ಚಡಪಡಿಕೆ, ತಳಮಳ ಮೊದಲಾದ ಅನಿಯಂತ್ರಿತ ಭಾವನೆಗಳು ಮೂಡುತ್ತವೆ.

ಆತಂಕದ ಅಸ್ವಸ್ಥತೆ ಮತ್ತು ಶಾಲೆಯಲ್ಲಿ ಖಿನ್ನತೆ ಹೆಚ್ಚಿಸುವ ಸಂದರ್ಭ, ಮನೆ ಮತ್ತು ಹೊರಗೆ ಮಗುವಿನ ಜೀವನದಲ್ಲಿ ಅನಗತ್ಯ ಹಸ್ತಕ್ಷೇಪಗಳು ಅವರ ನಡವಳಿಕೆ ಮತ್ತು ಆಲೋಚನೆಗಳ ಮೇಲೆ ಕೆಟ್ಟ ಪರಿಣಾಮ ಬೀರುತ್ತವೆ. ತರಗತಿಯಲ್ಲಿ ನಡೆಯುವ ಕಿತ್ತಾಟಗಳು ಮತ್ತು ಮಕ್ಕಳ–ಮಕ್ಕಳ ನಡುವಿನ ಟೀಕೆಗಳು ಹೆಚ್ಚು ಗಂಭೀರ ಸಮಸ್ಯೆಯಾಗುವ ಮುನ್ನ ಅವುಗಳನ್ನು ನಿವಾರಿಸಬೇಕು. ಬೇಕಾದರೆ ಅದಕ್ಕೆ ವೃತ್ತಿಪರರ ವೈದ್ಯರ ಸಹಾಯ ಪಡೆಯಬಹುದು.

ತಂದೆ, ತಾಯಿಗಳು ತಮ್ಮ ಮಗುವಿನ ಆತಂಕವು ಯಾವ ಹಂತ ತಲುಪುತ್ತಿದೆ ಎಂಬುದನ್ನು ಹೇಗೆ ತಿಳಿದುಕೊಳ್ಳಬಹುದು, ಮಗುವಿನಲ್ಲಿ ಆತಂಕ, ಭಯ, ಮುಜುಗರ ಅಥವಾ ನಾಚಿಕೆ ಮೊದಲಾದವುಗಳು ಅತಿ ಎನ್ನುವಷ್ಟು ಕಾಣುತ್ತಿದೆಯೇ? ಹೀಗಿದ್ದಾಗ ನಿಮ್ಮ ಮಗುವಿನಲ್ಲಿ ಗಮನಿಸಬೇಕಾದ ಕೆಲವು ಅಂಶಗಳೆಂದರೆ:

## ಆತಂಕದ ಅಸ್ವಸ್ಥತೆ ಮತ್ತು ಖಿನ್ನತೆ

- ದುಃಖ, ಚಡಪಡಿಕೆ, ಆಯಾಸ, ಮಂಕು ಹಾಗೂ ಆಲಸ್ಯ
- ಏಕಾಗ್ರತೆಯ ಸಮಸ್ಯೆಗಳು
- ಕೆಟ್ಟ ಕನಸುಗಳೊಂದಿಗೆ ನಿದ್ರಾಭಂಗ ಅಥವಾ ನಿದ್ರೆ ಬಾರದಿರುವುದು.
- ಸರಿಯಾಗಿ ಆಹಾರ ಸೇವಿಸದಿರುವುದು
- ತಕ್ಷಣವೇ ಕೋಪಗೊಳ್ಳುವುದು ಅಥವಾ ಕೆರಳಿಸುವುದು. ಕೋಪದ ಸಮಯದಲ್ಲಿ ತನ್ನನ್ನು ನಿಯಂತ್ರಿಸಿಕೊಳ್ಳದೇ ಇರುವುದು.
- ನಿರಂತರವಾಗಿ ಚಿಂತಿಸುತ್ತಿರುವುದು ಅಥವಾ ನಕಾರಾತ್ಮಕ ಆಲೋಚನೆಗಳನ್ನು ಹೊಂದಿರುವುದು.
- ಉದ್ವಿಗ್ನ ಭಾವನೆ ಅಥವಾ ಪದೇಪದೇ ಶೌಚಾಲಯವನ್ನು ಹೆಚ್ಚಾಗಿ ಬಳಸುವುದು.
- ಯಾವಾಗಲೂ ಅಳುವುದು
- ಹೊಟ್ಟೆ ನೋವಿನ ಬಗ್ಗೆ ದೂರು ಹೇಳುವುದು ಅಥವಾ ಅಸ್ವಸ್ಥ ಭಾವನೆ
- ಪ್ರತ್ಯೇಕತೆ ಬಯಸುವುದು
- ಅತಿ ಸಂಕೋಚದ ಭಾವನೆ

ಮಕ್ಕಳು ಮತ್ತು ಹದಿಹರೆಯದವರಲ್ಲಿ ಕೆಲವು ರೀತಿಯ ಆತಂಕದ ಅಸ್ವಸ್ಥತೆಗಳು.

ಸಾಮಾನ್ಯವಾಗಿ ಆತಂಕದ ಅಸ್ವಸ್ಥತೆಯುಳ್ಳ ಮಕ್ಕಳು ಒಂದು ನಿರ್ದಿಷ್ಟ ಘಟನೆಯ ಬದಲಿಗೆ ವ್ಯಾಪಕವಾದ ಸಂದರ್ಭ ಮತ್ತು ಸಮಸ್ಯೆಗಳ ಬಗ್ಗೆ ಆತಂಕವನ್ನು ಹೊಂದಿರುತ್ತಾರೆ.

## ನಿರ್ದಿಷ್ಟ ವಿಷಯದ ಬಗ್ಗೆ ಭಯ ಅಥವಾ ಫೋಬಿಯಾ (ದಿಗಿಲು, ಹೆದರಿಕೆ):

ಮಕ್ಕಳು ಸಾಮಾನ್ಯವಾಗಿ ನಾಯಿ ಅಥವಾ ನೀರು, ವಿಚಿತ್ರ ವ್ಯಕ್ತಿ, ತೆರೆದ ಸ್ಥಳ, ರಾತ್ರಿ, ಎತ್ತರ ಮತ್ತು ಮುಚ್ಚಿದ ಸ್ಥಳವನ್ನು ನೋಡಿ ಹೆದರುತ್ತವೆ. ಭಯ ಹೆಚ್ಚಾದಾಗ, ಮಗುವಿನ ದಿನನಿತ್ಯದ ಜೀವನದ ಮೇಲೆ ಪರಿಣಾಮ ಬೀರುತ್ತದೆ. ಮಗು ನಿರ್ದಿಷ್ಟ ವಿಷಯಗಳಿಗೆ ಆತಂಕಪಡುತ್ತದೆ.

## ಪ್ರತ್ಯೇಕತೆಯ ಆತಂಕದಿಂದಾದ ಅಸ್ವಸ್ಥತೆ

ಮಕ್ಕಳು ತಂದೆ, ತಾಯಿಗಳಿಂದ ಅಥವಾ ಸ್ಥಳದಿಂದ ಬೇರ್ಪಟ್ಟಾಗ ಇದು ತಮಗೆ ಸೂಕ್ತವಲ್ಲ ಎಂಬ ಆತಂಕದ ಭಾವನೆಯನ್ನು ವ್ಯಕ್ತಪಡಿಸುತ್ತವೆ. ಬೇರ್ಪಡುವಿಕೆಯ ಆತಂಕವೆಂದರೆ ಮಗು ತನ್ನ ತಂದೆ, ತಾಯಿ ಅಥವಾ ನಿತ್ಯ ತಮ್ಮನ್ನು ನೋಡಿಕೊಳ್ಳುವವರು ಇಲ್ಲವೆಂದು ಆತಂಕಗೊಳ್ಳುತ್ತದೆ. ಇದು ಚಿಕ್ಕ ಮಕ್ಕಳಲ್ಲಿ ಹೆಚ್ಚಾಗಿರುತ್ತದೆ. ಮಗು ಸುಮಾರು ಆರು ತಿಂಗಳ ಶಿಶುವಾಗಿದ್ದಾಗಲೇ ಈ ಭಾವನೆ ಬೆಳೆಯುತ್ತದೆ. ಇಂತಹ ಮಕ್ಕಳನ್ನು ನರ್ಸರಿ ಅಥವಾ ಶಾಲೆಗಳಲ್ಲಿ ಕಾಪಾಡುವುದು ತುಂಬಾ ಕಷ್ಟಕರವಾಗುತ್ತದೆ. ಹಿರಿಯ ಮಕ್ಕಳು ಪ್ರತ್ಯೇಕತೆಯ ಆತಂಕಕ್ಕೆ ಮನೆ, ಸ್ನೇಹಿತರು ಮತ್ತು ಶಿಕ್ಷಕರಲ್ಲಿ ಪ್ರತಿಕ್ರಿಯಿಸುವುದರಿಂದ ಅವರು ತಾವು ಅಸುರಕ್ಷಿತರಾಗಿದ್ದೇವೆ ಎಂದುಕೊಳ್ಳಬಹುದು.

### ಆತಂಕ ಮತ್ತು ಖಿನ್ನತೆಯನ್ನು ತಡೆಗಟ್ಟುವುದು

• ಮನೋವೈದ್ಯರು ಮತ್ತು ಮನಃಶಾಸ್ತ್ರಜ್ಞರನ್ನು ಭೇಟಿ ಮಾಡುವುದು. • ಮಾನಸಿಕ ಮೌಲ್ಯಮಾಪನಕ್ಕಾಗಿ ಶಾಲಾ ಶಿಕ್ಷಕರಿಗೆ ತರಬೇತಿ ನೀಡುವುದು. • ಕೌನ್ಸೆಲಿಂಗ್ • ಕೌಟುಂಬಿಕ ಚಿಕಿತ್ಸೆ • ಯೋಗ • ಧ್ಯಾನ • ವ್ಯಾಯಾಮ • ಮನರಂಜನಾ ಚಿಕಿತ್ಸೆ • ಡೈವರ್ಷನಲ್ ಥೆರಪಿ • ಬಿಹೆವಿಯರಲ್ ಥೆರಪಿ • ಅರಿವಿನ ವರ್ತನೆಯ ಥೆರಪಿ (ಸಿಬಿಟಿ)



## ಸಾಮಾಜಿಕ ಆತಂಕದ ಅಸ್ವಸ್ಥತೆ

ಸಾಮಾಜಿಕ ಆತಂಕದ ಅಸ್ವಸ್ಥತೆ ಎಂದರೆ ಸಾರ್ವಜನಿಕವಾಗಿ ಓಡಾಡಲು, ಸ್ನೇಹಿತರನ್ನು ನೋಡಲು ಅಥವಾ ಚಟುವಟಿಕೆಗಳಲ್ಲಿ, ಕ್ರೀಡೆಗಳಲ್ಲಿ ಪಾಲ್ಗೊಳ್ಳಲು ಹಿಂಜರಿಯುವುದಾಗಿರುತ್ತದೆ. ಕೆಲವು ಮಕ್ಕಳು ಹದಿಹರೆಯದಲ್ಲಿ 'ಸಾಮಾಜಿಕ ಸಂಕೋಚ'ವನ್ನು ಅನುಭವಿಸುತ್ತಾರೆ. ಶಾಪಿಂಗ್ ಅಥವಾ ಫೋನ್‌ನಲ್ಲಿ ಮಾತನಾಡುವಂತಹ ದೈನಂದಿನ ಚಟುವಟಿಕೆಗಳ ವೇಳೆಯೂ ತೀವ್ರವಾದ, ಅಗಾಧ ಭಯ ಉಂಟಾಗಿ "ಸಾಮಾಜಿಕ ಆತಂಕದ ಅಸ್ವಸ್ಥತೆ" ಸಮಸ್ಯೆ ಉದ್ಭವವಾಗುತ್ತದೆ. ಇವುಗಳ ಪ್ರಭಾವದಿಂದ ಮಕ್ಕಳು ಏನಾದರೂ ಹೇಳುವುದು ಅವಮಾನಕರವೆಂದು ಭಾವಿಸಿ ಹೇಳಲು ಭಯಪಡುತ್ತಾರೆ. ಸಾಮಾಜಿಕ ಆತಂಕದ ಅಸ್ವಸ್ಥತೆ ಪ್ರೌಢಾವಸ್ಥೆಗೆ ಕಾಲಿಡುತ್ತಿರುವ ದೊಡ್ಡ ಮಕ್ಕಳ ಮೇಲೂ ಪರಿಣಾಮ ಬೀರುತ್ತದೆ.

## ಶಾಲಾ–ಆಧಾರಿತ ಆತಂಕದ ಅಸ್ವಸ್ಥತೆ

ಶಾಲೆಗೆ ಹೋಗುತ್ತಿರುವಾಗ, ಶಾಲೆಯಲ್ಲಿನ ಕೆಲಸ, ಸ್ನೇಹಿತರು ಬೆದರಿಸುವುದು, ವಿಶೇಷವಾಗಿ ಶಾಲೆಯ ಬದಲಾವಣೆ ಅಥವಾ ಮತ್ತೊಂದು ಹಂತದ ವಿದ್ಯಾಭ್ಯಾಸಕ್ಕೆ ಹೋದಾಗ ಸಹಜವಾಗಿ ಕೆಲ ಮಕ್ಕಳು ಆತಂಕಕ್ಕೆ ಒಳಗಾಗುತ್ತಾರೆ. ಅಂತಹ ಮಕ್ಕಳು ತಮ್ಮ ಚಿಂತೆಗಳನ್ನು ಯಾರೊಂದಿಗೂ ಹಂಚಿಕೊಳ್ಳದಿರಬಹುದು ಅಥವಾ ಹೊಟ್ಟೆ ನೋವು ಅಥವಾ ಅನಾರೋಗ್ಯಕ್ಕೊಳಗಾಗಿದ್ದೇವೆ ಎಂಬಂತೆ ನಟಿಸಬಹುದು. ಇಂತಹ ಸಂದರ್ಭದಲ್ಲಿ ಮಕ್ಕಳು ಬೆಳಗಿನ ಹೊತ್ತಿನಲ್ಲಿ ಸುಸ್ತಾದವರಂತೆ ಕಾಣುತ್ತಾರೆ ಅಥವಾ ಅಳುತ್ತಾರೆ.

## ಒತ್ತಡದ ವಾತಾವರಣ

ಆತಂಕ ಮೂಡಿಸುವಂತಹ ಜನರನ್ನು ಕಂಡಾಗ ಮಕ್ಕಳ ನಡವಳಿಕೆಯಲ್ಲಿ ಆತಂಕಕಾರಿ ಅಂಶ ಕಾಣಬರುತ್ತದೆ. ಕೆಲವು ಮಕ್ಕಳು ಸತತ ಒತ್ತಡದಿಂದಾಗಿ ಆತಂಕದ ಮನಃಸ್ಥಿತಿಯನ್ನು ಬೆಳೆಸಿಕೊಳ್ಳಬಹುದು. ಅಂಥವರಿಗೆ ಅನೇಕ ಕೆಲಸಗಳಲ್ಲಿ ಒಂದನ್ನು ಮಾತ್ರ ನಿಭಾಯಿಸಲು ಸಾಧ್ಯವಾಗುತ್ತದೆ. ಹಲವಾರು ಕಷ್ಟಕರ ಕೆಲಸಗಳನ್ನು ಒಟ್ಟಿಗೆ ನಿಭಾಯಿಸಲು ಅವರಿಗೆ ಸಾಧ್ಯವಾಗುವುದಿಲ್ಲ.

- ನೀವು ಯಾವಾಗಲೂ ಬದಲಾವಣೆಯನ್ನು ನಿರೀಕ್ಷಿಸುತ್ತಿರುವಾಗ ಮನೆ ಮತ್ತು ಶಾಲೆಗೆ ಆಗಾಗ್ಗೆ ಸ್ಥಳಾಂತರಗೊಳ್ಳಲು ಕಷ್ಟವಾಗುತ್ತದೆ
- ವಿಚ್ಛೇದನ ಅಥವಾ ಪೋಷಕರ ಪ್ರತ್ಯೇಕತೆ
- ಪೋಷಕರ ಜಗಳ ಮತ್ತು ಪರಸ್ಪರ ವಾದ ಮಾಡುವುದು
- ಹತ್ತಿರದ ಸಂಬಂಧಿ ಅಥವಾ ಸ್ನೇಹಿತನ ಸಾವು
- ಅಪಘಾತದಲ್ಲಿ ಗಂಭೀರವಾಗಿ ಗಾಯಗೊಳ್ಳುವುದು ಅಥವಾ ಅಸ್ವಸ್ಥರಾಗುವುದು
- ಕುಟುಂಬದಲ್ಲಿ ಯಾರಾದರೂ ಅನಾರೋಗ್ಯ ಪೀಡಿತರು ಅಥವಾ ಅಂಗವಿಕಲರನ್ನು ಹೊಂದಿರುವುದು
- ಹೋಮ್‌ವರ್ಕ್ ಅಥವಾ ಪರೀಕ್ಷೆಗಳು, ಬೆದರಿಸುವಿಕೆ ಅಥವಾ ಸ್ನೇಹಕ್ಕೆ ಸಂಬಂಧಿಸಿದ ಸಮಸ್ಯೆಗಳು
- ಅಪರಾಧದಲ್ಲಿ ಭಾಗಿಯಾಗುವುದು
- ನಿಂದನೆ ಅಥವಾ ನಿರ್ಲಕ್ಷ್ಯಕ್ಕೆ ಒಳಗಾಗುವುದು.

## ಮಕ್ಕಳಲ್ಲಿ ಆತಂಕ ಮತ್ತು ಖಿನ್ನತೆಯ ಗಂಭೀರತೆ

ಬಾಲ್ಯದಲ್ಲಿ ಪ್ರಾರಂಭವಾಗುವ ಆತಂಕದ ಅಸ್ವಸ್ಥತೆ ಹದಿಹರೆಯದ ಮತ್ತು ಪ್ರೌಢಾವಸ್ಥೆಯ ಆರಂಭದಲ್ಲೂ ಇರುತ್ತದೆ. ಆತಂಕದ ಅಸ್ವಸ್ಥತೆ ಹೊಂದಿರುವ ಹದಿಹರೆಯದವರು ಭಾವನಾರಹಿತವಾದ ಖಿನ್ನತೆಯನ್ನು ಬೆಳೆಸಿಕೊಳ್ಳುವ ಸಾಧ್ಯತೆಯಿರುತ್ತದೆ. ಔಷಧಗಳನ್ನು ದುರುಪಯೋಗಪಡಿಸಿಕೊಳ್ಳುವುದು ಮತ್ತು ಆತ್ಮಹತ್ಯೆ ಮಾಡಿಕೊಳ್ಳುವ ಭಾವನೆಯನ್ನು ಬೆಳೆಸಿಕೊಳ್ಳುತ್ತಾರೆ. ದೀರ್ಘಕಾಲದ ಆತಂಕವು ಮಗುವಿನ ವೈಯಕ್ತಿಕ ಬೆಳವಣಿಗೆ, ಕೌಟುಂಬಿಕ ಜೀವನ ಮತ್ತು ಶಾಲಾ ಶಿಕ್ಷಣಕ್ಕೆ ತೀವ್ರ ಅಡ್ಡಿಯನ್ನು ಉಂಟು ಮಾಡಬಹುದು. ಈ ಹಂತದಲ್ಲಿ ಮಗುವಿಗೆ ಹೆಚ್ಚಿನ ಸಹಾಯಕ್ಕಾಗಿ ಮನಃಶಾಸ್ತ್ರಜ್ಞರು ಅಥವಾ ಮನೋವೈದ್ಯರಿಂದ ಕೌನ್ಸೆಲಿಂಗ್ ಕೊಡಿಸುವ ಹಾಗೂ ವೃತ್ತಿಪರರ ಸಹಾಯವನ್ನು ಪಡೆಯಬೇಕಾಗುತ್ತದೆ.

## ಮಕ್ಕಳಲ್ಲಿನ ಆತಂಕ ಮತ್ತು ಖಿನ್ನತೆಯಲ್ಲಿ ಶಾಲಾ ಶಿಕ್ಷಕರ ಪಾತ್ರ

ಇಂತಹ ಮಕ್ಕಳ ತಂದೆ, ತಾಯಿಗಳಲ್ಲಿ ಮನೋವೈದ್ಯರು, ಆರಂಭಿಕ ಸಮಾಲೋಚನೆಯಿಂದ ಖಿನ್ನತೆ ಮತ್ತು ಆತಂಕದ ಸ್ವರೂಪವನ್ನು ಗುರುತಿಸುತ್ತಾರೆ. ಇದಕ್ಕೆ ಚಿಕಿತ್ಸೆ ಮಾಡುವ ಸಂದರ್ಭದಲ್ಲಿ ಶಾಲಾ ಶಿಕ್ಷಕರ ಪಾತ್ರ ಪ್ರಮುಖವಾದದ್ದು. ಶಾಲೆಯಲ್ಲಿ ಮಕ್ಕಳ ಕಾರ್ಯಕ್ಷಮತೆಯ ನಿಯಮಿತ ಮೌಲ್ಯಮಾಪನ ಮತ್ತು ಈ ಮಕ್ಕಳು ಇತರ ಮಕ್ಕಳೊಂದಿಗೆ ಯಾವ ರೀತಿ ವರ್ತಿಸುತ್ತಾರೆ, ಅವರ ಚಟುವಟಿಕೆಗಳಲ್ಲಿ ಆಗುವ ಬದಲಾವಣೆಳೇನು ಎಂದು ಗುರುತಿಸಿ ಅದನ್ನು ಮನೋವೈದ್ಯರಿಗೆ ಅಥವಾ ಪೋಷಕರಿಗೆ ತಿಳಿಸುವುದು ಅಗತ್ಯ.

■ ಕನ್ನಡಕ್ಕೆ: ಬಿ.ಎಂ.ಸುನೀತಾ

# ಶ್ರೀದೇವಿ ರಮಣಮಹರ್ಷಿ ಪುರಸ್ಕಾರ ಪ್ರದಾನ



ಡಾ. ಲಾವಣ್ಯ ರಮಣ ಅವರು ನ್ಯಾಯಮೂರ್ತಿ ಎಂ.ಎನ್.ವೆಂಕಟಾಚಲಯ್ಯ ಅವರಿಗೆ 2023ನೆಯ ಸಾಲಿನ ಶ್ರೀದೇವಿ ರಮಣಮಹರ್ಷಿ ಪ್ರಶಸ್ತಿ ನೀಡಲು ಸಕಲ ಸಿದ್ಧತೆ ಮಾಡಿಕೊಂಡಿದ್ದರು. ಮಾಜಿ ಮುಖ್ಯಮಂತ್ರಿಗಳು ಮತ್ತು ಮಾಜಿ ಕೇಂದ್ರ ಸಚಿವರಾದ ಡಾ.ಎಂ.ವೀರಪ್ಪ ಮೊಯಿಲಿ ಅವರು ಇತರ ಮುಖ್ಯ ಅತಿಥಿಗಳಾದ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ. ಮಾಜಿ ಶಾಸಕರಾದ ಡಿ.ಆರ್. ಪಾಟೀಲ, ಡಾ.ಎಂ.ಆರ್.ಹುಲಿನಾಯ್ಕರ್, ಶ್ರೀಮತಿ ಶಾಂತಾದುರ್ಗಾದೇವಿ ಹುಲಿನಾಯ್ಕರ್, ಶ್ರೀಮತಿ ಅಂಬಿಕಾ ಪಾಟೀಲ, ಎಂ.ಎಸ್.ಪಾಟೀಲ ಮತ್ತು ಡಾ.ರಮಣ ಹುಲಿನಾಯ್ಕರ್ ಜೊತೆಗೂಡಿ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ ಅವರಿಗೆ ಪ್ರಶಸ್ತಿಯನ್ನು ನೀಡಿದರು.

ಈ ಪ್ರಶಸ್ತಿಯು ಬಿನ್ನವತ್ತಳೆ, ಪ್ರಶಸ್ತಿ ಫಲಕ, ಶಾಲು, ಹಾರ, ಮೈಸೂರು ಪೇಟ ಮತ್ತು ನಗದು ಮೊತ್ತವನ್ನೊಳಗೊಂಡಿತ್ತು. ಪ್ರಶಸ್ತಿ ವಿತರಣೆಯ ನಂತರ ಭರ್ಜರಿಯಾಗಿ ನ್ಯಾಯಮೂರ್ತಿ ವೆಂಕಟಾಚಲಯ್ಯ ಅವರ ಮೇಲೆ ಪುಷ್ಪವೃಷ್ಟಿಯಾಯಿತು. ಈ ದೃಶ್ಯವನ್ನು ಕಂಡು ಆನಂದದಿಂದ ಕಣ್ಣಿನಲ್ಲಿ ನೀರ ಹನಿ ಜಿನುಗಿತು.

ಸಭೆಯ ಪ್ರಾರಂಭದಲ್ಲಿ ಕುಮಾರಿ ವೈಷ್ಣವಿ ಪ್ರಾರ್ಥನೆ ಸಲ್ಲಿಸಿದರು. ಕೊನೆಯಲ್ಲಿ ಎಂ.ಎಸ್.ಪಾಟೀಲ ಅವರು ವಂದನಾರ್ಪಣೆ ಮಾಡಿದರು. ಗ್ರಂಥಕ್ಕೆ ಅಂದವಾದ ಮುಖಪುಟ ಮತ್ತು ವಿನ್ಯಾಸ ಮಾಡಿಕೊಟ್ಟ ಕಲಾವಿದ ಎಂ.ಎಸ್.ಸಾಗರ್ ಮತ್ತು ಸುಂದರವಾಗಿ ಮುದ್ರಿಸಿಕೊಟ್ಟ ಮಾರುತಿ ಪ್ರಿಂಟರ್ಸ್‌ನ ಹೆಚ್. ಪ್ರಕಾಶ್ ಅವರಿಗೆ ಸನ್ಮಾನ ಮಾಡಲಾಯಿತು. ಕಾರ್ಯಕ್ರಮವನ್ನು ನ್ಯಾಯಮೂರ್ತಿ ವೆಂಕಟಾಚಲಯ್ಯ ಅವರ ಗ್ರಂಥದ ಲೇಖಕರಾದ ಡಾ.ಕೆ.ಆರ್.ಕಮಲೇಶ್ ಅವರು ನಿರೂಪಿಸಿದರು.



## ಚರಿತ್ರಾರ್ಹ ಘಟನೆ

– ಡಾ.ರಮಣ ಹುಲಿನಾಯ್ಕರ್

ಶ್ರೀದೇವಿ ಶಿಕ್ಷಣ ಸಂಸ್ಥೆ ಮತ್ತು ಶ್ರೀ ದುರ್ಗಾಂಬಿಕಾದೇವಿ ಚಾರಿಟಬಲ್ ಟ್ರಸ್ಟ್‌ನ ಇತಿಹಾಸದಲ್ಲಿ ಇದೊಂದು ಚರಿತ್ರಾರ್ಹವಾದ ದಿನ. ಡಾ.ಹುಲಿನಾಯ್ಕರ್ ದಂಪತಿಯ ಬಹುದಿನದ ಕನಸು ಇಂದು ನನಸಾಗಿದೆ. ಪರಮಪೂಜ್ಯರೂ, ಮಹಾಮಹಿಮರು ಆಗಿರುವ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ ಅವರಿಗೆ ಇಂದು 'ಶ್ರೀದೇವಿ ರಮಣಮಹರ್ಷಿ' ಪ್ರಶಸ್ತಿ ನೀಡುವ ಭಾಗ್ಯ ನಮಗೆ ಒದಗಿದೆ. ವೇದಿಕೆಯನ್ನು ಅಲಂಕರಿಸಿರುವ ವ್ಯಕ್ತಿಗಳು ಸಹ ಕರ್ನಾಟಕ ರಾಜ್ಯದಲ್ಲಿ ತಮ್ಮ ಸೇವೆಯಿಂದ ಜನಮನವನ್ನು ಗೆದ್ದಿದ್ದಾರೆ. ಅವರ ಸಮ್ಮುಖದಲ್ಲಿ ಈ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯುತ್ತಿರುವುದು ಅರ್ಥಪೂರ್ಣವಾಗಿದೆ. ಎಲ್ಲರನ್ನೂ ಅಭಿಮಾನದಿಂದ ಸ್ವಾಗತಿಸಲು ನನಗೆ ಹರ್ಷವೆನಿಸಿದೆ.



## ಪ್ರಾಮಾಣಿಕ ಬದುಕನ್ನು ದಾಖಲು ಮಾಡಿರುವ ಬಿನ್ನವತ್ತಳೆ

– ಅಂಬಿಕಾ ಎಂ. ಹುಲಿನಾಯ್ಕರ್

ನ್ಯಾಯಮೂರ್ತಿ ಪೂಜ್ಯ ಎಂ.ಎನ್.ವೆಂಕಟಾಚಲಯ್ಯ ಅವರ ವಾಸ್ತವ ಬದುಕನ್ನು ದಾಖಲು ಮಾಡಿ ಅವರಿಗೆ ಅರ್ಪಿಸುತ್ತಿರುವ ಈ ಬಿನ್ನವತ್ತಳೆ ಓದುವುದೇ ನನ್ನ ಮಹಾಪುಣ್ಯ. ಪೂಜ್ಯರ 95 ವರ್ಷದ ಸುದೀರ್ಘ ಬದುಕು ಅನೇಕ ಸಾಧನೆಗಳ ಮೈಲಿಗಲ್ಲು. ಬಾಲ್ಯದಿಂದಲೂ ಅತ್ಯಂತ ಪ್ರತಿಭಾವಂತ ವಿದ್ಯಾರ್ಥಿಯಾದ ಎಂ.ಎನ್. ವೆಂಕಟಾಚಲಯ್ಯ ಅವರು ಏರಿದ ಎತ್ತರ ಬಹು ದೊಡ್ಡದು. ನ್ಯಾಯಾಂಗ ಕ್ಷೇತ್ರಕ್ಕೆ ಸಲ್ಲಿಸಿರುವ ಅವರ ಕೊಡುಗೆಯನ್ನು ದೇಶದ ಎಲ್ಲ ಪ್ರಜ್ಞಾವಂತರು ಬಲ್ಲವರಾಗಿದ್ದಾರೆ. ಮಹಾನ್ ವಿದ್ವಾಂಸರಾಗಿರುವ ಪೂಜ್ಯ ವೆಂಕಟಾಚಲಯ್ಯ ಅತ್ಯಂತ ಸರಳರು ಮತ್ತು ಪ್ರಾಮಾಣಿಕರು.

ನಮ್ಮ ಶ್ರೀದೇವಿ ಕುಟುಂಬಕ್ಕೆ ಶ್ರೀ ಮೂಕಾಂಬಿಕಾದೇವಿಯ ಆಶೀರ್ವಾದ ದೊರೆಯಲು ಅವರು ಕಾರಣಕರ್ತರಾಗಿದ್ದಾರೆ. ಅದಕ್ಕಾಗಿ ನಾವು ಅವರಿಗೆ ಚಿರಋಣಿಗಳಾಗಿದ್ದೇವೆ. ನಮ್ಮೆಲ್ಲರ ಬದುಕಿನಲ್ಲಿ ಇವು ಮರೆಯಲಾಗದ ಮಧುರ ಕ್ಷಣಗಳಾಗಿವೆ.



ಡಾ.ಕೆ.ಆರ್.ಕಮಲೇಶ್ ರಚಿಸಿದ ಜ್ಞಾನ, ಬದ್ಧತೆ ಮತ್ತು ಮಾನವೀಯತೆಯ ತ್ರಿವೇಣಿ ಸಂಗಮ 'ನ್ಯಾಯಮೂರ್ತಿ ಎಂ.ಎನ್.ವೆಂಕಟಾಚಲಯ್ಯ' ಕೃತಿ ಬಿಡುಗಡೆ ಸಮಾರಂಭದಲ್ಲಿ...

## ನಡೆದಾಡುವ ವಿಶ್ವಕೋಶ

– ಡಾ.ಎಂ.ಆರ್. ಹುಲಿನಾಯ್ಕರ್

ನಾವು ನಾಲ್ಕು ದಶಕಗಳಿಂದಲೂ ಶ್ರೀದೇವಿ ಶಿಕ್ಷಣ ಸಂಸ್ಥೆ ಮತ್ತು ಶ್ರೀದೇವಿ ಆಸ್ಪತ್ರೆಗಳನ್ನು ನಿರ್ವಹಿಸುತ್ತಾ ಜನಪರ ಕೆಲಸಗಳನ್ನು ಮಾಡಿಕೊಂಡು ಬಂದಿದ್ದೇವೆ. ನಮಗೆ ಲೌಕಿಕ ಬದುಕಿನ ಜೊತೆಗೆ ಆಧ್ಯಾತ್ಮಿಕ ಚಿಂತನೆಯೂ ಅಗತ್ಯವೆನಿಸಿದೆ. ಬಾಲ್ಯದಲ್ಲಿ ಕಳೆದ ತುಪ್ಪದಕುರಹಟ್ಟಿಯಲ್ಲಿದ್ದ 'ಇಂಚಗೇರಿ ಸಂಪ್ರದಾಯ ಮತ್ತು ಅನೇಕ ಅವಧೂತರು' ನನಗೆ ಬದುಕಿನಲ್ಲಿ ನಿಜವಾದ ಮೌಲ್ಯ ಯಾವುದು ಎಂಬುದು ತಿಳಿಯುವಂತೆ ಮಾಡಿದ್ದರು. ಅದು ವಿಶಾಲದೃಷ್ಟಿಯಿಂದ ಅಧ್ಯಾತ್ಮವನ್ನು ನೋಡುವಂತೆ ಮಾಡಿದೆ. ಜಾತಿ, ಮತ ಮತ್ತು ಸಂಪ್ರದಾಯವನ್ನು ಮೀರಿ ಪರಬ್ರಹ್ಮನನ್ನು ಧ್ಯಾನಿಸುವುದನ್ನು ಕಲಿಸಿದೆ.

ಶ್ರೀ ದುರ್ಗಾಂಬಿಕಾದೇವಿ ಮನುಷ್ಯನಲ್ಲಿರುವ ಅಸುರೀಭಾವನೆಯನ್ನು ತೊಡೆದುಹಾಕಿ ಅಲ್ಲಿ ಸಾತ್ವಿಕ ಶಕ್ತಿ ಉದಯವಾಗುವಂತೆ ಮಾಡುತ್ತಾಳೆ. ನವರಾತ್ರಿಯ ಆಚರಣೆ ಸಹ ಇದೇ ಅರ್ಥವನ್ನು ಹೊಂದಿದೆ. ರಾಕ್ಷಸೀಶಕ್ತಿಗಳ ದಮನ ಹೊರಪ್ರಪಂಚದಲ್ಲಿ ಆಗುವುದಕ್ಕಿಂತ ಮನುಷ್ಯನ ಅಂತರಂಗದಲ್ಲಿ ಆಗಬೇಕು. ಅಂತರಂಗದಲ್ಲಿ ನಡೆಯುವ ಇಂತಹ ಹೋರಾಟಕ್ಕೆ ಅವಧೂತರ ಕೃಪೆ ಅಗತ್ಯವಿದೆ.

ನ್ಯಾಯಮೂರ್ತಿ ಎಂ.ಎನ್.ವೆಂಕಟಾಚಲಯ್ಯ ಅವರನ್ನು ಬೆಂಗಳೂರಿನ ಅವರ ಮನೆಯಲ್ಲಿ ಹತ್ತಾರು ಸಲ ಭೇಟಿಯಾಗಿದ್ದೇನೆ. ಪ್ರತಿಸಲ ಅವರಲ್ಲಿಗೆ ಹೋದಾಗ ನನಗೆ ಜ್ಞಾನದ ಹಿಮಾಲಯದ ತಳದಲ್ಲಿ ಕುಳಿತಿದ್ದೇನೆ ಎಂಬ ಭಾವನೆ ಬರುತ್ತದೆ. ಅವರು ಕಾನೂನು ಕ್ಷೇತ್ರದಲ್ಲಿ ಪಂಡಿತರು ಎಂದರೆ ಆಶ್ಚರ್ಯದ ವಿಚಾರವಲ್ಲ. ಅದು ಅವರ ವೃತ್ತಿಯೂ ಹೌದು, ಪ್ರವೃತಿಯೂ ಹೌದು. ಅದನ್ನು ಮೀರಿ ನ್ಯಾಯಮೂರ್ತಿ ವೆಂಕಟಾಚಲಯ್ಯ ಅವರು ನಮಗೆ ಕಾಣುತ್ತಾರೆ. Quantum Physics and Medical Science ವಿಷಯಗಳಲ್ಲಿ ಮುಂದಿನ ದಶಕದಲ್ಲಿ ನಡೆಯವ ಸಂಶೋಧನೆಗಳನ್ನು ಕುರಿತು ಅಧಿಕೃತವಾಗಿ ಚರ್ಚೆ ಮಾಡುತ್ತಾರೆ. ಶಿಲ್ಪಶಾಸ್ತ್ರ, ತಂತ್ರಶಾಸ್ತ್ರ, ಲಲಿತಕಲೆ, ಅರ್ಥಶಾಸ್ತ್ರ, ತತ್ವಶಾಸ್ತ್ರ, ಪರಿಸರ ವಿಜ್ಞಾನ, ಕೃತಕ ಬುದ್ಧಿಮತ್ತೆ ಮೊದಲಾದ ಜಲ್ವಂತ ವಿಷಯಗಳ ಬಗ್ಗೆ ನ್ಯಾಯಮೂರ್ತಿ ಸಮಯದ ಪರಿವೆಯೆ ಇಲ್ಲದೆ ಮಾತನಾಡಬಲ್ಲರು. ಜ್ಞಾನದ ವಿವಿಧ ಶಾಖೆಯಲ್ಲಿ ಅವರಿಗಿರುವ ವಿದ್ವತ್ತು ಕಂಡು ಆಶ್ಚರ್ಯವಾಗುತ್ತದೆ. ಅವರನ್ನು 'ನಡೆದಾಡುವ ವಿಶ್ವಕೋಶ' ಎಂದರೆ ತಪ್ಪಿಲ್ಲ.



# ಜನಪರ ಸರ್ಕಾರಕ್ಕೆ ಶಿಕ್ಷಣ ಮತ್ತು ಆರೋಗ್ಯ ಆದ್ಯತಾ ವಲಯವಾಗಬೇಕು

– ಬಸವರಾಜ ಬೊಮ್ಮಾಯಿ



ಕೆಲವು ವ್ಯಕ್ತಿಗಳು ನಿರ್ದಿಷ್ಟ ಕ್ಷೇತ್ರದಲ್ಲಿ ಸಾಧನೆ ಮಾಡುತ್ತಾ ಸಮಾಜದ ಒಳಿತಿಗೆ ವಿಶೇಷವಾದ ಕಾಣಿಕೆ ಕೊಡುತ್ತಾರೆ. ಅಂತಹ ವ್ಯಕ್ತಿಗಳಿಗೆ ಇನ್ನೂ ಸಾಧನೆ ಮಾಡುವುದು ಬಾಕಿ ಉಳಿದಿರುತ್ತದೆ. ಅಂತಹವರನ್ನು ಸಾಧನೆಯ ಮಾರ್ಗದಲ್ಲಿರುವವರು ಎನ್ನಲಾಗುತ್ತದೆ. ಈಗಾವರು ಮಾಡಿರುವಷ್ಟು ಸಾಧನೆಯು ಸಮಾಜಕ್ಕೆ ಉಪಯುಕ್ತವಾಗಿರುತ್ತದೆ.

ಮತ್ತೆ ಕೆಲವು ಮಹಾಪುರುಷರು ಅಮೋಘವಾದ ಸಾಧನೆ ಮಾಡಿ ಅದರ ಪೂರ್ಣಫಲವನ್ನು ಸಮಾಜಕ್ಕೆ ಕೊಟ್ಟು ತಾವು ನಿರ್ಲಿಪ್ತರಾಗಿ ಕುಳಿತಿರುತ್ತಾರೆ. ಅವರನ್ನೇ ಅವಧೂತರು ಎನ್ನುವುದು. ಅಂತಹವರ ಸಾಲಿಗೆ ನ್ಯಾಯಮೂರ್ತಿ ಎಂ.ಎನ್.ವೆಂಕಟಾಚಲಯ್ಯ ಅವರು ಸೇರ್ಪಡೆಯಾಗಿರುತ್ತಾರೆ.

ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ಕೊಟ್ಟಿರುವ ತೀರ್ಪುಗಳು ಮತ್ತು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾಗಿ ಕೊಟ್ಟಿರುವ ವರದಿಯಲ್ಲಿ ಅವರ ಋಜು ಸ್ವಭಾವ ಪ್ರಕಟವಾಗಿದೆ. ಅವರ ಮನಸ್ಸು ಮನುಜ ಕಲ್ಯಾಣದತ್ತ ಸದಾ ಬಾಗಿರುತ್ತದೆ.

ಧಾರ್ಮಿಕ ವಿಚಾರಗಳಲ್ಲಿ ಪಾಪ–ಪುಣ್ಯಗಳಿಗೆ ಹೆಚ್ಚಿನ ಮಹತ್ವ. ಇದನ್ನು ಆರ್ಥಿಕಕ್ಷೇತ್ರಕ್ಕೂ ಅನ್ವಯಿಸಬಹುದು. ಪಾಪ ಪ್ರಜ್ಞೆಯಿಂದ ಪುಣ್ಯದ ಕೆಲಸ ಮಾಡಿದರೆ ವ್ಯಕ್ತಿಗೆ ಮಾತ್ರವಲ್ಲ ಸಮಾಜಕ್ಕೂ ದೊಡ್ಡ ಕೊಡುಗೆ ದೊರೆಯುತ್ತದೆ. ನಾನು ಮುಖ್ಯಮಂತ್ರಿಯಾಗಿದ್ದಾಗ ಎರಡು ಕ್ಷೇತ್ರಗಳಿಗೆ ಹೆಚ್ಚಿನ ಆದ್ಯತೆ ಕೊಟ್ಟಿದ್ದೆ. ಅವುಗಳೆಂದರೆ ಶಿಕ್ಷಣ ಮತ್ತು ಆರೋಗ್ಯ. ಡಯಾಲಿಸಿಸ್ ಮಾಡಿಸಿಕೊಳ್ಳುವವರಿಗೆ ಹೆಚ್ಚಿನ ಅನುದಾನ ಕೊಟ್ಟಿದ್ದೆ. ಅದೇ ಕ್ಯಾನ್ಸರ್ ರೋಗಿಗಳು ಪಡೆಯುವ ಕಿಮೋಥೆರಪಿಗೂ ಹೆಚ್ಚಿನ ಹಣಕಾಸು ಸೌಲಭ್ಯ ಕೊಡಲಾಗಿತ್ತು. ಈ ಎರಡು ಕಾಯಿಲೆಗಳು ಮನುಷ್ಯನಿಗೆ ಅತ್ಯಂತ ಭೀಕರವೆನಿಸುವ ಕಾಯಿಲೆಗಳಾಗಿದ್ದು, ಎಲ್ಲ ಸರ್ಕಾರಗಳು ಈ ಸಂದರ್ಭದಲ್ಲಿ ರೋಗಿಯ ಪರ ನಿಲ್ಲಬೇಕಾಗಿರುತ್ತದೆ.

ಡಾ.ಹುಲಿನಾಯ್ಕರ್ ಅವರು ನಮ್ಮ ಕಡೆಯವರು. ಅವರನ್ನು ನೋಡಿದಾಗೆಲ್ಲಾ ನನಗೆ ಆಶ್ಚರ್ಯವಾಗುತ್ತದೆ. ಇಂತಹ ಶ್ರೇಷ್ಠ ಶಿಕ್ಷಣ ಸಂಸ್ಥೆ ಮತ್ತು ಆಸ್ಪತ್ರೆಗಳನ್ನು ಮಾಡಿದ್ದರೂ ಅವರಲ್ಲಿ ಕಿಂಚಿತ್ತೂ ಅಹಂಕಾರವಿಲ್ಲ. ನಾನು ಅನೇಕ ಖಾಸಗಿ ಶಿಕ್ಷಣ ಸಂಸ್ಥೆಗಳ ಮಾಲೀಕರನ್ನು ನೋಡಿದ್ದೇನೆ. ಅವರಲ್ಲಿ ಕೃತಕತೆ ಮತ್ತು ವ್ಯಕ್ತಿ ಪ್ರತಿಷ್ಠೆ ತುಂಬಿರುತ್ತದೆ.

ಡಾ.ಹುಲಿನಾಯ್ಕರ್‌ರಂತಹ ಅತ್ಯಂತ ಸರಳ ಮತ್ತು ನಿರಹಂಕಾರಿ ವ್ಯಕ್ತಿಗಳು ತುಂಬ ಅಪರೂಪ. ಅವರನ್ನು ನೋಡಿ ಕಲಿಯುವುದು ಬಹಳವಿದೆ. ಅವರು ಹೇಳಿದ ಇಂಚಿಗೇರಿ ಸಂಪ್ರದಾಯವನ್ನು ನಾನು ನೋಡಿದ್ದೇನೆ. ಅದೊಂದು ಅವಧೂತ ಪರಂಪರೆಯ ಪಂಥ. ದೇವರನ್ನು ಕಾಣಲು, ಮುಟ್ಟಲು ಅವರು ಯಾವುದೇ ನಿರ್ಬಂಧ ಹೇರುವುದಿಲ್ಲ.

# ತ್ಯಾಗಶೀಲ, ಸಾತ್ವಿಕ ಬದುಕು

– ಡಿ.ಆರ್.ಪಾಟೀಲ

1980ರಲ್ಲಿ ನಾನು ಪೂಜ್ಯ ರಮಣ ಮಹರ್ಷಿ ಕುರಿತು ಪುಸ್ತಕವೊಂದನ್ನು ಓದಿದೆ. ಅದರಲ್ಲಿ 'ಮನುಷ್ಯನ ಬದುಕಿನಲ್ಲಿ ಸಂಭವಿಸುವ ಘಟನೆಗಳು ಪೂರ್ವ ನಿರ್ಧಾರಿತ' ಎಂಬ ಮಾತು ಬರುತ್ತದೆ. ಆಗ ನನಗೆ ಆ ಮಾತಿನಲ್ಲಿ ನಂಬಿಕೆ ಬಂದಿರಲಿಲ್ಲ. ವಯಸ್ಸಾದ ಮೇಲೆ ಜೀವನದಲ್ಲಿ ನಡೆದ ಘಟನೆಗಳು ಪೂಜ್ಯ ರಮಣರ ಮಾತನ್ನು ಪುಷ್ಟೀಕರಿಸಿದವು. ಇಂದು ಸೆಪ್ಟೆಂಬರ್ 30ರಂದು ಸಮಾರಂಭಕ್ಕೆ (ಸೆಪ್ಟೆಂಬರ್ 29 ರಂದು ನಡೆಯುವ ಸಮಾರಂಭ) ಸಚಿವರಾದ ಎಚ್.ಕೆ.ಪಾಟೀಲ ಬದಲಿಗೆ ನಾನು ಬರಬೇಕು ಎಂದು ವಿಧಿ ಸಂಕಲ್ಪವಿತ್ತೇನೋ! ದೇಶದ ರಾಜಕೀಯ ಘಟನೆಗಳನ್ನು ತೆಗೆದುಕೊಳ್ಳಿ, ಅನೇಕರು ಅನಿರೀಕ್ಷಿತವಾಗಿ ಮುಖ್ಯಮಂತ್ರಿಗಳಾಗಿದ್ದಾರೆ. ಪ್ರಧಾನಮಂತ್ರಿಗಳಾಗಿದ್ದಾರೆ. ರಾಜ್ಯದಲ್ಲೂ ಅಂತಹವು ಸಂಭವಿಸಿವೆ. ನಮಗೆ ತಾತ್ಕಾಲಿಕವಾಗಿ ಆಶ್ಚರ್ಯವಾದರೂ ನಮ್ಮ ಕಣ್ಣಿನ ಆಚೆ ಅನೇಕ ಸತ್ಯಗಳಿರುತ್ತವೆ ಎಂಬುದನ್ನು ಅರಿಯಬೇಕು. ಇಂತಹ ತಿಳಿವಳಿಕೆ ಅಧ್ಯಾತ್ಮಪ್ರಜ್ಞೆಯಿಂದ ಬರುತ್ತದೆ. ನ್ಯಾಯಮೂರ್ತಿ ವೆಂಕಟಾಚಲಯ್ಯ ಅವರನ್ನು ನೋಡಿದಾಗ ವ್ಯಕ್ತಿ ತನ್ನ ಆಂತರಿಕ ಸಾಧನೆಯಿಂದ ಯಾವ ಎತ್ತರಕ್ಕೆ ಏರಬಹುದು ಎಂಬುದು ತಿಳಿಯುತ್ತದೆ.

ನ್ಯಾಯಮೂರ್ತಿ ಎಂ.ಎನ್.ವೆಂಕಟಾಚಲಯ್ಯ ಅವರನ್ನು ಕುರಿತು ಡಾ.ಕೆ.ಆರ್.ಕಮಲೇಶ್ ರಚಿಸಿದ ಜೀವನಚರಿತ್ರೆಯನ್ನು ಬಿಡುಗಡೆ ಮಾಡಲು ನನಗೆ ದೊರಕಿರುವ ಅವಕಾಶ



ನನ್ನ ಪಾಲಿಗೆ ಸಂದ ಮಹತ್ತರ ಭಾಗ್ಯ ಎಂದೇ ಭಾವಿಸುತ್ತೇನೆ. ನ್ಯಾಯಮೂರ್ತಿ ನಮ್ಮ ಕುಟುಂಬಕ್ಕೆ ತುಂಬ ಹತ್ತಿರದವರು. ನನ್ನ ಸೋದರ ಎಚ್.ಕೆ.ಪಾಟೀಲರ ವಿಚಾರದಲ್ಲಿ ಅವರಿಗೆ ವಿಶೇಷವಾದ ಮಮತೆ. ಅದಕ್ಕೆ ಈ ಸಂದರ್ಭದಲ್ಲಿ ಭಕ್ತಿಪೂರ್ವಕ ನಮಸ್ಕಾರಗಳನ್ನು ಅರ್ಪಿಸುತ್ತೇನೆ.

ಡಾ.ಕೆ.ಆರ್.ಕಮಲೇಶ ರಚಿಸಿದ ನ್ಯಾಯಮೂರ್ತಿಗಳ ಗ್ರಂಥದಲ್ಲಿ ಅವರ ಮೌಲ್ಯಯುತ ಬದುಕನ್ನು ಕಂಡಾಗ ಅಶ್ಚರ್ಯವಾಗುತ್ತದೆ. ಅದೇ ರೀತಿ ಗೌರವ ಸಹ ಮೂಡುತ್ತದೆ. ಶ್ರೇಯುತರ ತಂದೆ ಸಹ ಶ್ರೇಷ್ಠ ಜ್ಞಾನಿಗಳು. ಯಾವುದಕ್ಕೂ ಅಪೇಕ್ಷೆ ಪಡದ ನಿರ್ಲಿಪ್ತರು. ಅವರು ಮೈಸೂರು ಸಂಸ್ಥಾನದಲ್ಲಿ ಕಾನೂನು ಶಿಕ್ಷಣಕ್ಕೆ ತಳಪಾಯ ಹಾಕಿದವರು.

ನ್ಯಾಯಮೂರ್ತಿ ವೆಂಕಟಾಚಲಯ್ಯ ಅವರು ಲೌಕಿಕ ವಿಚಾರಗಳಿಗೆ ಯಾರನ್ನೂ ಪ್ರಾರ್ಥಿಸಿಕೊಂಡಿಲ್ಲ. ಅವರ ಮನೆಯ ಬಾಗಿಲಿಗೆ ಎಲ್ಲವೂ ಬಂದಿವೆ. ಭಾರತದ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿದ್ದ ಮಾನ್ಯ ಅಜಿತನಾಥ ರೇ ಅವರು ಬೆಂಗಳೂರಿಗೆ ಬಂದು ಇವರನ್ನು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನಾಗಿ ನೇಮಿಸುತ್ತಾರೆ. ಮತ್ತೊಮ್ಮೆ ಆರ್. ಎಸ್. ಪಾಠಕ್ ಅವರು ಬೆಂಗಳೂರಿಗೆ ಆಗಮಿಸಿ ಸರ್ವೋಚ್ಚ ನ್ಯಾಯಾಲಯಕ್ಕೆ ಕರೆದುಕೊಂಡು ಹೋಗುತ್ತಾರೆ.

ನ್ಯಾಯಮೂರ್ತಿ ವೆಂಕಟಾಚಲಯ್ಯ ಅವರ ಇಡೀ ಬದುಕು ದೈವಸದೃಶದಿಂದ ತುಂಬಿದೆ. ಅಲ್ಲಿ ಅಪಾರವಾದ ಮಾನವಪ್ರೀತಿ ಗೋಚರವಾಗುತ್ತದೆ. ಮನಸ್ಸಿಗೆ ಹಿತ ಕೊಡುವ ಮೌಲ್ಯಗಳ ಆರಾಧನೆಯಿದೆ. ಭಾರತೀಯ ಸಂಸ್ಕೃತಿಯಲ್ಲಿ ಕಾಣುವ ಋಷಿ ಪರಂಪರೆಯಂತೆ ಜ್ಞಾನಾರ್ಜನೆಗೆ ಈ ಬದುಕು ಮೀಸಲು ಎಂಬ ಮನೋಧರ್ಮ ಅವರಲ್ಲಿದೆ. ಲೌಕಿಕ ಬದುಕನ್ನು ಸರಳವಾಗಿಸಿಕೊಂಡು ಲೋಕೋತ್ತರ ಚಿಂತನೆ ಮಾಡುವ ಮಹಾಜ್ಞಾನಿಯ ಬದುಕನ್ನು ಇಲ್ಲಿ ಕಾಣಬಹುದು.

ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ ಅವರಂತೆ ತ್ಯಾಗಶೀಲ ಮತ್ತು ಸಾತ್ವಿಕ ಬದುಕನ್ನು ನಡೆಸುವವರನ್ನು ಕಾಣುವುದು ತುಂಬ ಅಪರೂಪ. ಮುಂದಿನ ತಲೆಮಾರಿನವರಿಗೆ ಈ ಬದುಕು ತುಂಬಾ ಆದರ್ಶವಾಗಿ ಕಂಡರೆ ಆಶ್ಚರ್ಯಪಡಬೇಕಾಗಿಲ್ಲ.

ಈ ಸಂದರ್ಭದಲ್ಲಿ, ನಮ್ಮ ಕಡೆಯವರಾದ ಡಾ.ಹುಲಿನಾಯ್ಕರ್ ಅವರನ್ನು ಅಭಿನಂದಿಸಲೇಬೇಕು. ಅವರ ಪ್ರಯತ್ನದಿಂದಾಗಿ ಮರೆಯಾಗಿದ್ದ ಈ ಅಮೂಲ್ಯ ವಜ್ರ ಇಂದು ನಮ್ಮ ಕಣ್ಣಿಗೆ ಬಿದ್ದಿದೆ.

# ಇಂದಿನ ಮಕ್ಕಳು ವಿಶ್ವದ ನಾಗರಿಕತೆ ಸಂಸ್ಕೃತಿಯ ಉತ್ತರಾಧಿಕಾರಿಗಳು

– ಡಾ.ಎಂ.ವೀರಪ್ಪ ಮೊಯಿಲಿ

ಮಿತ್ರರೇ, ನ್ಯಾಯಮೂರ್ತಿ ವೆಂಕಟಾಚಲಯ್ಯ ಅವರಿಗೆ ಶ್ರೀದೇವಿ ರಮಣ ಮಹರ್ಷಿ ಪ್ರಶಸ್ತಿ ನೀಡಿದ ಮೇಲೆ ಅವರಂತೆ ಮತ್ತೊಬ್ಬರನ್ನು ಈ ಪುರಸ್ಕಾರಕ್ಕೆ ಹುಡುಕುವುದು ಡಾ.ಹುಲಿನಾಯ್ಕರ್ ಅವರಿಗೆ ಕಷ್ಟವೆಂದು ನನ್ನ ಭಾವನೆ. ಒಮ್ಮೆ ಇಂತಹ ಪ್ರಶಸ್ತಿಯನ್ನು ಮೇರುಪುರುಷರಿಗೆ ಕೊಟ್ಟ ಮೇಲೆ ಜನತೆ ಮತ್ತೊಂದು ವರ್ಷದ ಪ್ರಶಸ್ತಿಯ ಸಂದರ್ಭದಲ್ಲಿ ಹಿಂದಿನ ವ್ಯಕ್ತಿಯನ್ನು ನೆನೆಯುತ್ತಾರೆ. ಯಾರಿಗಾದರೂ ವೆಂಕಟಾಚಲಯ್ಯ ಅವರಂತೆ ಇನ್ನೊಬ್ಬರನ್ನು ಸಮಕಾಲೀನ ಜಗತ್ತಿನಲ್ಲಿ ಕಾಣುವುದು ಕಷ್ಟವೆನಿಸಿದರೆ ಆಶ್ಚರ್ಯವಿಲ್ಲ.

ನಾನು ಬೆಂಗಳೂರಿನಲ್ಲಿ ಕಾನೂನು ವಿದ್ಯಾರ್ಥಿಯಾದ ಕಾಲದಿಂದಲೂ ವೆಂಕಟಾಚಲಯ್ಯ ಅವರನ್ನು ನೋಡುತ್ತಾ ಬಂದಿದ್ದೇನೆ. ಅವರ ಜ್ಞಾನ ಗೌರಿಶಂಕರದಷ್ಟು ಎತ್ತರದಲ್ಲಿರುವಂತಹುದು. ಯಾರೇ ಅವರ ಬಳಿ ಹೋದರೂ ಅವರಿಗೆ ಸರಸ್ವತೀಯ ಸೇವೆ ಮಾಡುವಂತೆ ಪ್ರೇರಣೆ ನೀಡುತ್ತಾರೆ. ನಾನು ಇಂಗ್ಲಿಷ್‌ನಲ್ಲಿ 'ನ್ಯಾಯಶಾಸ್ತ್ರ' ಗ್ರಂಥ ಬರೆಯಲು ನ್ಯಾಯಮೂರ್ತಿ ವೆಂಕಟಾಚಲಯ್ಯ ಅವರೇ ಪ್ರೇರಣೆ. ನನ್ನ ಕೈಯಲ್ಲಿ ಈ ಬೃಹತ್ ಕೆಲಸ ಸಾಧ್ಯವಾಗುವುದಿಲ್ಲ. ಅದಕ್ಕೆ ಅಷ್ಟು ಸಮಯ ಕೊಡಲು ಆಗುವುದಿಲ್ಲ ಎಂದರೆ ನಿಮ್ಮಲ್ಲಿ ಬರವಣಿಗೆಯ ಶಕ್ತಿಯಿದೆ, ಅದನ್ನು ಉಪಯೋಗಿಸಿಕೊಳ್ಳಿ ಎಂದು ಹುರಿದುಂಬಿಸಿದವರು ನ್ಯಾಯಮೂರ್ತಿಗಳು.

ಇಂದಿನ ಯುವಜನಾಂಗಕ್ಕೆ ಐದುಸಾವಿರ ವರ್ಷಗಳ ವಿಶ್ವ ನಾಗರಿಕತೆ ಮತ್ತು ಸಂಸ್ಕೃತಿ ಬಳುವಳಿಯಾಗಿ ದೊರಕಿದೆ. ಅವರ ಜೀನ್ಸ್‌ನಲ್ಲಿ ನಾಗರಿಕತೆಯಿಂದ ದೊರೆತ ಕಲಿಕೆ ಮಿಳಿತವಾಗಿರುತ್ತದೆ. ಅದಕ್ಕಾಗಿ ಇಂದಿನ ಮಕ್ಕಳು ನಮಗಿಂತ ಹೆಚ್ಚು



ಬುದ್ಧಿವಂತರಿರುತ್ತಾರೆ. ಅವರಿಗೆ ಸೂಕ್ತ ಮಾರ್ಗದರ್ಶನ ಅಗತ್ಯ.

ನಾನು ಕಾರ್ಕಳದಲ್ಲಿ, ಮಧ್ಯದಲ್ಲಿ ಶಾಲೆ ತೊರೆದ ಮಕ್ಕಳಿಗಾಗಿ 'ಕಿಸಾನ್ ಸಭಾ' ಮೂಲಕ ಶಾಲೆಯನ್ನು ನಡೆಸುತ್ತಿದ್ದೇನೆ. ಅನೇಕ ಕಾರಣಗಳಿಂದಾಗಿ ಮಕ್ಕಳು ಶಾಲೆ ತೊರೆಯುತ್ತಾರೆ. ಅವರನ್ನು ವಿದ್ಯೆಯ ಮಾರ್ಗಕ್ಕೆ ತರುವುದಷ್ಟೇ ಶಿಕ್ಷಣ ಸಂಸ್ಥೆಯ ಕೆಲಸ. ಅವರು ಕೇವಲ ಶೇಕಡ 35ರಷ್ಟು ಅಂಕ ತೆಗೆದಿರಬಹುದು. ಅವರಿಗೆ ಸಕಾಲದಲ್ಲಿ ಮಾರ್ಗದರ್ಶನ ದೊರಕಿದರೆ ಪ್ರಥಮ ಸ್ಥಾನಕ್ಕೇರುವ ಸಾಧ್ಯತೆ ಹೆಚ್ಚಾಗಿರುತ್ತದೆ. ಅದು ನನ್ನ ಅನುಭವ.

ಭಾರತದ ಯುವ ಜನಾಂಗಕ್ಕೆ ವಿಶ್ವದ ಎಲ್ಲೆಡೆ ಮಾನ್ಯತೆಯಿದೆ. ನಾನು ಅಮೆರಿಕದ ಸಿಲಿಕಾನ್ ಸಿಟಿಗೆ ಹೋಗಿದ್ದೆ. ಅಲ್ಲಿ ಭಾರತದ ಯುವಜನಾಂಗ ತನ್ನ ಪ್ರತಿಭೆಯಿಂದಾಗಿ ಉತ್ತಮ ಸ್ಥಾನಮಾನ ಪಡೆದಿದೆ. 1992ರಲ್ಲಿ ಜಾರಿಗೆ ಬಂದ ಉದಾರೀಕರಣ ಮತ್ತು ಜಾಗತೀಕರಣದ ನೀತಿಯಿಂದ ಸಿಇಟಿ ಮೂಲಕ ಭಾರಿ ಸಂಖ್ಯೆಯಲ್ಲಿ ಯುವಜನಾಂಗ ತಾಂತ್ರಿಕ ಶಿಕ್ಷಣಕ್ಕೆ ಬಂದಿದ್ದು, ಹೊಸ ಸಂಚಲನವನ್ನು ದೇಶದಲ್ಲಿ ಮೂಡಿಸಿದೆ. ಮಧ್ಯಮವರ್ಗದ ಆರ್ಥಿಕಸ್ಥಿತಿ ಬದಲಾಗಿರುವುದನ್ನು ಗಮನಿಸಬಹುದು. ನಾವು ಯುವಜನಾಂಗಕ್ಕೆ ಸೂಕ್ತ ಮಾರ್ಗದರ್ಶನ ನೀಡಿದರೆ ಅವರು ಎಲ್ಲಿದ್ದರೂ ದೇಶದ ಸಂಪತ್ತಾಗಿ ಉಳಿಯುತ್ತಾರೆ. ನಮ್ಮ ಯುವಜನಾಂಗದಲ್ಲಿ ಹುದುಗಿರುವ ಪ್ರತಿಭೆಯನ್ನು ಹೊರತೆಗೆಯುವ ಕೆಲಸವಾಗಬೇಕಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಕಲಿಕೆಯಲ್ಲಿ ಕೆಲವು ವಿಷಯಗಳಲ್ಲಿ ಹಿಂದಿರಬಹುದು. ಅದನ್ನು ಶಿಕ್ಷಕರು ಪತ್ತೆ ಮಾಡಿ ಅವರಿಗೆ ಮಾರ್ಗದರ್ಶನ ನೀಡಿದರೆ ಖಂಡಿತ ಅವರು ಅತ್ಯುನ್ನತ ಸಾಧನೆ ಮಾಡುವುದರಲ್ಲಿ ಯಾವುದೇ ಸಂಶಯವಿಲ್ಲ.

ನಮ್ಮ ಸಮಾಜದಲ್ಲಿ ತಪ್ಪು ಕಲ್ಪನೆ ಮನೆ ಮಾಡಿಕೊಂಡಿದೆ. ಮೀಸಲಾತಿಯಿಂದ ಬಂದವರು ಪ್ರತಿಭಾವಂತರಲ್ಲ ಎನ್ನುವುದು ಕೆಲವರ ಪೂರ್ವಗ್ರಹವಾದ ನಂಬಿಕೆ. ಈ ವಿಚಾರ ಡಾ.ಅಂಬೇಡ್ಕರ್ ಅವರ ಕಾಲದಿಂದಲೂ ಇದೆ. ಸಾಮಾಜಿಕ ಮತ್ತು ಐತಿಹಾಸಿಕ ಕಾರಣಗಳಿಗಾಗಿ ಕೆಲವು ಸಮುದಾಯಗಳಿಗೆ ಅವಕಾಶ ದೊರಕಿರಲಿಲ್ಲ. ಅವರಿಗೆ ಸ್ವಲ್ಪ ಪ್ರಮಾಣದಲ್ಲಿ ಆದ್ಯತೆ ಕೊಟ್ಟಾಗ ಅವರಿಂದ ಅದ್ಭುತ ಸಾಧನೆಯಾಗಿರುವುದನ್ನು ಗಮನಿಸಬಹುದು.

ಪ್ರಧಾನಿ ಡಾ.ಮನಮೋಹನ ಸಿಂಗ್ ಮತ್ತು ಶ್ರೀಮತಿ ಸೋನಿಯಾ ಗಾಂಧಿ, ಐಐಟಿ ಮತ್ತು ಐಐಎಂಗಳಲ್ಲಿ ಹಿಂದುಳಿದವರಿಗೆ ಮೀಸಲಾತಿ ಕೊಡಲು ನನ್ನ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿದರು. ಆಗ ಇನ್‌ಫೋಸಿಸ್‌ನ ನಾರಾಯಣ ಮೂರ್ತಿ ಸೇರಿದಂತೆ ಹಲವರು ಈ ಸಂಸ್ಥೆಗಳ ಗುಣಮಟ್ಟ ಮತ್ತು ಪ್ರತಿಷ್ಠೆ ಕಡಿಮೆಯಾಗುತ್ತದೆ ಎಂದರು. ನಾವು ವೈಜ್ಞಾನಿಕವಾಗಿ ಚಿಂತಿಸಿ ಅವರಿಗೆ ಅವಕಾಶಗಳನ್ನು ಕೊಟ್ಟೆವು. ಅದರಿಂದ ಆಕಾಶ ಬಿದ್ದು ಹೋಗಲಿಲ್ಲ. ಅಲ್ಲಿಂದ ಬಂದ ಈ ವರ್ಗದ ಮಕ್ಕಳು ಕಳೆದ 20 ವರ್ಷಗಳಿಂದ ಅತ್ಯುತ್ತಮ ಸಾಧನೆ ಮಾಡುತ್ತಲೇ ಬರುತ್ತಿದ್ದಾರೆ. ವ್ಯಕ್ತಿ ಬೆಳೆಯಲು ಅವಕಾಶ ಮತ್ತು ಸೂಕ್ತ ಮಾರ್ಗದರ್ಶನ ಅತ್ಯಂತ ಅಗತ್ಯವಾದ ಅಂಶವಾಗಿದೆ.

# ಹೂವು ಭಾರವೆನಿಸಿದೆ

> ಜಗತ್ತಿನಲ್ಲಿ ಹೂವು ಎಂದೂ ಭಾರವಾಗಿರುವುದಕ್ಕೆ ಸಾಧ್ಯವಿಲ್ಲ. ಡಾ.ಹುಲಿನಾಯ್ಕರ್ ಅವರು ಇಂದು ನನ್ನ ಮೇಲೆ ತಮ್ಮ ಅಗಾಧ ಪ್ರೀತಿ, ಪ್ರೇಮ ಮತ್ತು ವಾತ್ಸಲ್ಯದ ಪುಷ್ಪವೃಷ್ಟಿ ಮಾಡಿ ನಾನು ಸಂಕೋಚಗೊಳ್ಳುವಂತೆ ಮಾಡಿದ್ದಾರೆ. ಹಾಗಾಗಿ ನನಗೆ ಹೂವು ಭಾರವೆನಿಸಿದೆ.

**ನ್ಯಾ.ಎಂ.ಎನ್.ವೆಂಕಟಾಚಲಯ್ಯ**



ಜಗತ್ತಿನಲ್ಲಿ ಹೂವು ಎಂದೂ ಭಾರವಾಗಿರುವುದಕ್ಕೆ ಸಾಧ್ಯವಿಲ್ಲ. ಡಾ.ಹುಲಿನಾಯ್ಕರ್ ಅವರು ಇಂದು ನನ್ನ ಮೇಲೆ ತಮ್ಮ ಅಗಾಧ ಪ್ರೀತಿ, ಪ್ರೇಮ ಮತ್ತು ವಾತ್ಸಲ್ಯದ ಪುಷ್ಪವೃಷ್ಟಿ ಮಾಡಿ ನಾನು ಸಂಕೋಚಗೊಳ್ಳುವಂತೆ ಮಾಡಿದ್ದಾರೆ. ಹಾಗಾಗಿ ನನಗೆ ಹೂವು ಭಾರವೆನಿಸಿದೆ.

ನಾನು ವಯಸ್ಸಿನಲ್ಲಿ ಇಲ್ಲಿರುವ ಎಲ್ಲರಿಗಿಂತ ದೊಡ್ಡವನಿರಬಹುದು. ಆದರೆ ಜ್ಞಾನ ಮತ್ತು ಸಾಧನೆಯಿಂದ ಇಲ್ಲಿರುವ ಅನೇಕರು ನನಗಿಂತ ಎತ್ತರದ ಸ್ಥಾನದಲ್ಲಿದ್ದಾರೆ ಎಂಬ ಅರಿವು ನನಗಿದೆ.

ಡಾ.ಹುಲಿನಾಯ್ಕರ್ ಅವರು ನನ್ನನ್ನು ಈ ಸಮಾರಂಭಕ್ಕೆ ಆಹ್ವಾನ ಮಾಡಿದಾಗ, ಇಬ್ಬರು ಮಾಜಿ ಮುಖ್ಯಮಂತ್ರಿಗಳಾದ ಎಂ.ವೀರಪ್ಪ ಮೊಯಿಲಿ, ಬಸವರಾಜ ಬೊಮ್ಮಾಯಿ ಜೊತೆ ಸಚಿವರಾದ ಎಚ್.ಕೆ.ಪಾಟೀಲರೂ ಬರುತ್ತಾರೆ. ಅವರಿಗೆ ಧನ್ಯವಾದಗಳನ್ನು ಅರ್ಪಿಸಬಹುದು ಎಂಬ ಆಸೆಯಿಂದ ಒಪ್ಪಿಕೊಂಡಿದ್ದೆ. ಅವರುಗಳೇ ನನಗೆ ಅಭಿನಂದನೆಗಳನ್ನು ಹೇಳಿದ್ದಾರೆ. ಅವರ ಅಭಿನಂದನೆಗೆ ಅರ್ಹನೇ ಎಂದು ನನ್ನನ್ನು ನಾನು ಪ್ರಶ್ನಿಸಿಕೊಳ್ಳುವಂತೆ ಆಗಿದೆ.


ಡಾ.ಹುಲಿನಾಯ್ಕರ್ ಅವರ ಕುಟುಂಬ ನೋಡಿದರೆ ನನಗೆ ತುಂಬ ಸಂತೋಷವಾಗುತ್ತದೆ. ಶ್ರೀ ದುರ್ಗಾಂಬಿಕಾದೇವಿಯ ಪ್ರತಿಷ್ಠಾಪನಾ ಕಾಲದಿಂದಲೂ ನಾನು ಗಮನಿಸುತ್ತಾ ಬಂದಿದ್ದೇನೆ. ಡಾ. ಹುಲಿನಾಯ್ಕರ್ ದಂಪತಿ ಅತ್ಯಂತ ದೈವಭಕ್ತರು. ಕುಟುಂಬದ ಪ್ರತಿಯೊಬ್ಬ ಸದಸ್ಯರೂ ಅನ್ಯೋನ್ಯವಾಗಿದ್ದಾರೆ. ಈ ಕುಟುಂಬ ದೈವಶಕ್ತಿಯನ್ನು ನಂಬಿ ಪ್ರಾಮಾಣಿಕವಾದ ದುಡಿಮೆ ಮಾಡುತ್ತಿದೆ. ಇದರಿಂದ ಅವರಿಗೆ ಸತ್ಫಲ ದೊರೆಯುವುದರಲ್ಲಿ ಸಂಶಯವಿಲ್ಲ. ಅವರ ಮುಂದಿನ ಬದುಕಿನಲ್ಲಿ ಯಥೇಚ್ಛವಾದ ಯಶಸ್ಸು ದೊರೆಯಲಿ ಎಂದು ಹಾರೈಸುತ್ತೇನೆ.

ಇಂದಿನ ಸಮಾರಂಭ ಅನೇಕ ವಿಧದಲ್ಲಿ ಅರ್ಥಪೂರ್ಣವಾಗಿದೆ. ಮಾಜಿ ಮುಖ್ಯಮಂತ್ರಿಗಳಾದ ವೀರಪ್ಪ ಮೊಯಿಲಿ ಮತ್ತು ಬಸವರಾಜ ಬೊಮ್ಮಾಯಿ ಅವರುಗಳು ವಿಭಿನ್ನ ರಾಜಕೀಯ ಪಕ್ಷಕ್ಕೆ ಸೇರಿದವರು. ಅವರ ರಾಜಕೀಯ ಸಿದ್ಧಾಂತಗಳು ಉತ್ತರ –ದಕ್ಷಿಣ ಧ್ರುವಗಳಂತೆ ಇವೆ. ಆದರೆ ಇಲ್ಲಿ ಅವರಿಬ್ಬರೂ ಸೌಹಾರ್ದಯುತವಾಗಿ ಕುಳಿತಿದ್ದಾರೆ. ಜೊತೆಯಲ್ಲೇ ಮೆರವಣಿಗೆಯಲ್ಲಿ ಭಾಗವಹಿಸಿದ್ದಾರೆ. ಇಂತಹ ದೃಶ್ಯವನ್ನು ಕರ್ನಾಟಕದ ರಾಜಕಾರಣದಲ್ಲಿ ಮಾತ್ರ ನೋಡಲು ಸಾಧ್ಯ.

ನನಗೆ ಈಗ ಒಂದು ಸಂಗತಿ ಜ್ಞಾಪಕಕ್ಕೆ ಬರುತ್ತದೆ. 1972ರಲ್ಲಿ ಮದ್ರಾಸ್‌ನಲ್ಲಿ ಭಾರತದ ಹಿರಿಯ ರಾಜಕಾರಣಿಯಾಗಿದ್ದ ರಾಜಾಜಿ ಅವರು ನಿಧನರಾದರು. ಆಗ ಪೆರಿಯಾರ್ ರಾಮಸ್ವಾಮಿ ನಾಯ್ಕರ್ ಅವರು ವೆಲ್ಲೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ರಾಜಾಜಿ ಅವರು ನಿಧನರಾದ ಸುದ್ದಿ ತಿಳಿದ ತಕ್ಷಣ ವೈದ್ಯರ ಸಲಹೆಯನ್ನು ಧಿಕ್ಕರಿಸಿ ಮದ್ರಾಸ್‌ಗೆ ಬಂದು ರಾಜಾಜಿ ಅವರ ಅಂತಿಮ ದರ್ಶನ ಪಡೆದರು. ರಾಜಾಜಿ–ಪೆರಿಯಾರ್ ನಡುವೆ ಎಂತಹ ವೈರತ್ವವಿತ್ತು ಎಂದರೆ, ಸುಮ್ಮನೆ ಅವರ ಮಧ್ಯೆ ಗರಿಕೆ ಹಾಕಿದ್ದರೂ ಅದು ಇವರಿಬ್ಬರ ದೃಷ್ಟಿ ತಾಗಿ ಹತ್ತಿಕೊಳ್ಳುತ್ತಿತ್ತು ಎಂದು ಅಲ್ಲಿನವರು ಹೇಳುತ್ತಿದ್ದರು. ಅವರಿಬ್ಬರ ನಡುವೆ ಸಿದ್ಧಾಂತಗಳನ್ನು ಕುರಿತು ದ್ವೇಷವಿತ್ತೇ ಹೊರತು ಹಗೆತನವಿರಲಿಲ್ಲ.

ಇಂದು ರಾಜಕೀಯಪಕ್ಷದ ನಾಯಕರು ತಮ್ಮ ಮಾತಿನಿಂದ ಇಡೀ ಪರಿಸರವನ್ನು ಹೊಲಸು ಮಾಡುತ್ತಿದ್ದಾರೆ. ಅವರ ಮಾತುಗಳನ್ನು ಕೇಳಿದಾಗ ಇವರಿಗೆ ಸಂಸ್ಕಾರವಿರುವುದೇ ಎಂಬ ಅನುಮಾನ ಬರುವುದು ಸಹಜ. ರಾಜಕೀಯಪಕ್ಷಗಳ ವಿಚಾರದಲ್ಲಿ, ಸಿದ್ಧಾಂತದ ವಿಚಾರದಲ್ಲಿ ಘರ್ಷಣೆಯಾದರೆ ತೊಂದರೆಯಿಲ್ಲ. ಅಲ್ಲಿ ವ್ಯಕ್ತಿಗತ ನಿಂದನೆ ಕೇಳಿಬರುತ್ತಿದೆ. ಅದರಿಂದ ದೇಶದ ಸಾರ್ವಜನಿಕ ಕ್ಷೇತ್ರಕ್ಕೆ ತುಂಬ ಅಪಾಯವಿದೆ. ಸಾರ್ವಜನಿಕರ ದೃಷ್ಟಿಯಲ್ಲಿ ಎಲ್ಲ ನಾಯಕರು ಸಣ್ಣವರಾಗುತ್ತಾರೆ. ದೇಶದ ರಕ್ಷಣೆ ಮತ್ತು ಅಭಿವೃದ್ಧಿ ವಿಷಯದಲ್ಲಿ ಜನ ಭಾವುಕರಾಗಿ ತಮ್ಮ ನಾಯಕರನ್ನು ಪ್ರೀತಿಸಬೇಕು. ಮಹಾತ್ಮ ಗಾಂಧಿ, ನೆಹರು, ವಲ್ಲಭಭಾಯಿ ಪಟೇಲ್, ಲಾಲ್, ಬಹದ್ದೂರ್ ಶಾಸ್ತ್ರಿ ಇವರುಗಳನ್ನು ಜನ ತಮ್ಮ ಆತ್ಮೀಯರು ಎನ್ನುವಷ್ಟು ಹಚ್ಚಿಕೊಂಡಿದ್ದರು. ದೇಶದ ಎಲ್ಲ ರಾಜಕೀಯ ನಾಯಕರು ಜನರ ವಿಶ್ವಾಸಾರ್ಹತೆ ಗಳಿಸಿಕೊಳ್ಳುವತ್ತ ಚಿಂತಿಸಬೇಕು.

ಭಾರತದಲ್ಲಿ 140 ಕೋಟಿ ಜನಸಂಖ್ಯೆಯಿದೆ. ಜನಸಂಖ್ಯೆಯಲ್ಲಿ ನಾವು ವಿಶ್ವದಲ್ಲೇ ಪ್ರಥಮ ಸ್ಥಾನ ಮುಟ್ಟಬಹುದು. ಈ ಜನಸಂಖ್ಯೆಯಲ್ಲಿ




25 ವರ್ಷದ ಕೆಳಗಿನವರು ಶೇಕಡ 40ರಷ್ಟಿದ್ದಾರೆ. ದೇಶದ ಯೋಜನಾ ತಜ್ಞರು ಇದನ್ನು ವರವೆಂದು ಭಾವಿಸಬೇಕು. ಆದರೆ ಅವರು ಈ ಜನಸಾಂದ್ರತೆಯನ್ನು ಶಾಪವೆಂದು ಭಾವಿಸಿರುವುದು ದುರದೃಷ್ಟದ ವಿಚಾರ.

ದೇಶದಲ್ಲಿ ಶೇಕಡ 30ಕ್ಕಿಂತ ಹೆಚ್ಚು ಜನ ಬಡತನದ ರೇಖೆಗಿಂತ ಕೆಳಗಿರುವುದು ಎಲ್ಲರೂ ಚಿಂತಿಸಬೇಕಾದ ವಿಚಾರ. ವಿಶ್ವದ ಜಿಡಿಪಿಗೆ ನಮ್ಮ ಕೊಡುಗೆ ಶೇಕಡ 2.87 ಮಾತ್ರ. ನಮ್ಮಲ್ಲಿರುವ ಬಡವರ ಸಂಖ್ಯೆ ಯುರೋಪ್‌ನ ಒಟ್ಟು ಜನಸಂಖ್ಯೆಗಿಂತ ಹೆಚ್ಚಾಗಿದೆ. ಅದೇ ರೀತಿ ವಿಶ್ವದ ಶ್ರೀಮಂತರ ಪಟ್ಟಿಯಲ್ಲೂ ಭಾರತದ ಶ್ರೀಮಂತರಿಗೆ ಸ್ಥಾನವಿದೆ. ಪ್ರಜಾಪ್ರಭುತ್ವವಿರುವ ರಾಷ್ಟ್ರಗಳಲ್ಲಿ ಈ ಅಸಮಾನತೆ ವಿಪತ್ತಿಗೆ ಕಾರಣವಾಗಬಹುದು. ನಮ್ಮ ಆಡಳಿತಗಾರರು ಬೇಗ ಎಚ್ಚೆತ್ತುಕೊಳ್ಳುವ ಅಗತ್ಯವಿದೆ.

ವೈದ್ಯಕೀಯ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆಯನ್ನು ಈಗಲೇ ಗುರುತಿಸಬಹುದು. ಮನುಷ್ಯನ ಆಯಸ್ಸಿನ ಪ್ರಮಾಣ ಹೆಚ್ಚಾಗುವ ಎಲ್ಲಾ ಲಕ್ಷಣಗಳಿವೆ. ಆತ 140 ವರ್ಷದ ತನಕ ಬದುಕಿರುವ ಸಾಧ್ಯತೆ ಹೆಚ್ಚಿದೆ. ಇನ್ನುಂದೆ ಅನೇಕ ವೈದ್ಯಕೀಯ ಉಪಕರಣಗಳು ಮೂಲೆ ಸೇರಬಹುದು. ಈಗ ಪೆಥಾಲಜಿಯಲ್ಲಿ ರಕ್ತದ ವಿವಿಧ ಪರೀಕ್ಷೆಗಳನ್ನು ನಡೆಸುವುದೇ ದೊಡ್ಡ ಕೆಲಸವಾಗಿದೆ. ಇನ್ನು ಸ್ವಲ್ಪ ದಿನದಲ್ಲೇ ಬೆವರ ಹನಿ, ಒಂದು ಹನಿ ರಕ್ತ ಮತ್ತು Saliva ಅಂದರೆ ಎಂಜಲಿನಿಂದ ವ್ಯಕ್ತಿಯಲ್ಲಿರುವ ಕಾಯಿಲೆಯನ್ನು ಪತ್ತೆ ಹಚ್ಚಬಹುದಾಗಿದೆ.

Artificial Intelligence ಕ್ಷೇತ್ರ ವೈದ್ಯಕೀಯ ರಂಗವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿದೆ. ರೋಬೋಟಿಕ್ ಸರ್ಜರಿ ಹೆಚ್ಚು ಜನಪ್ರಿಯವಾಗುತ್ತಿದೆ. ಅಂತರ್ಜಾಲದ ಮೂಲಕ ವಿಶ್ವದ ಯಾವುದೇ ವೈದ್ಯರನ್ನು ಸಂಪರ್ಕಿಸಲು ಸಾಧ್ಯವಾಗಿದೆ.

ಇಂದಿನ ಯುವಜನರು ತುಂಬ ಅದೃಷ್ಟವಂತರು. ಜ್ಞಾನದ ಕಡಲು ಅವರ ಬಳಿಗೇ ಬಂದಿದೆ. ಅದನ್ನು ಸದುಪಯೋಗಪಡಿಸಿಕೊಳ್ಳುವ ಜವಾಬ್ದಾರಿ ನಮ್ಮ ಯುವಶಕ್ತಿಯ ಮೇಲಿದೆ.

ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯ ವಿಚಾರದಲ್ಲಿ ನಾವು ಪೂರ್ವಗ್ರಹ ಪೀಡಿತರಾಗಬೇಕಾಗಿಲ್ಲ. ಎಲ್ಲಾ ಪ್ರಾಚೀನ ಸಂಸ್ಕೃತಿಗಳಲ್ಲಿ ಒಳಿತು–ಕೆಡಕುಗಳ ವಿಚಾರವಿರುತ್ತದೆ. ಮುಕ್ತ ಮನಸ್ಸುಳ್ಳವರಾಗಿ ಒಳ್ಳೆಯ ವಿಚಾರಗಳನ್ನು ಮಾತ್ರ ಪಡೆದುಕೊಳ್ಳೋಣ.





▪ ಮಾಹಿತಿ: ಎನ್.ಆನಂದ ▪ ಫೋಟೋ: ಭೂಷಣ ನವ್ಯ ಸ್ಟುಡಿಯೊ

# ಶ್ರೀದೇವಿ ಪದವಿ ಮತ್ತು ಸ್ನಾತಕೋತ್ತರ ಕೇಂದ್ರ ಬೃಹತ್ ಉದ್ಯೋಗ ಮೇಳ–2023

"ಸ್ಪರ್ಧಾತ್ಮಕ ಜಗತ್ತಿನಲ್ಲಿ ಪದವೀಧರರಾದ ನಂತರ ಲಭ್ಯವಿರುವ ಉದ್ಯೋಗಾವಕಾಶಗಳನ್ನು ತಮ್ಮದಾಗಿಸಿಕೊಳ್ಳಲು ಯುವಜನತೆ ಸಮರ್ಥರಾಗಬೇಕು ಜೀವನದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯೂ ಗುರಿ ಮುಟ್ಟುವುದರ ಕಡೆ ಗಮನ ಕೊಡಬೇಕು. ತುಮಕೂರು ಹಾಗೂ ವಿವಿಧ ಜಿಲ್ಲೆಗಳಿಂದ ಆಗಮಿಸಿರುವ ಸಾವಿರಕ್ಕೂ ಹೆಚ್ಚಿನ ವಿದ್ಯಾರ್ಥಿಗಳಿಗೆ ಉದ್ಯೋಗ ಮೇಳಕ್ಕೆ ಹಾರ್ದಿಕ ಸ್ವಾಗತ"ಎಂದು ಶ್ರೀದೇವಿ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್. ಪಾಟೀಲ್ ಅವರು ಪ್ರಾರಂಭದಲ್ಲಿ ತಿಳಿಸಿದರು.

ಶ್ರೀದೇವಿ ಪದವಿ ಮತ್ತು ಸ್ನಾತಕೋತ್ತರ ಕೇಂದ್ರ ಹಾಗೂ ಡಾ.ರೆಡ್ಡಿಸ್ ಫೌಂಡೇಷನ್ ಇವರುಗಳ ಸಹಯೋಗದೊಂದಿಗೆ ಬೃಹತ್ ಉದ್ಯೋಗ ಮೇಳವನ್ನು 2023ರ ಸೆಪ್ಟೆಂಬರ್ 22ರಂದು ಕಾಲೇಜಿನ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಶ್ರೀದೇವಿ ಕಾಲೇಜಿನ ಆಡಳಿತಾಧಿಕಾರಿಯಾದ ಟಿ.ವಿ.ಬ್ರಹ್ಮದೇವಯ್ಯರವರು "ಈ ಸಂಸ್ಥೆಯಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣದೊಂದಿಗೆ ಅವರ ಸಾಧನೆಗೆ ಸದಾಕಾಲ ಪ್ರೋತ್ಸಾಹ ಹಾಗೂ ಬೆಂಬಲ ದೊರೆಯುತ್ತಿದೆ. ಇಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ದೇಶ–ವಿದೇಶಗಳ ಪ್ರತಿಷ್ಠಿತ ಕಂಪನಿಗಳಲ್ಲಿ ಉತ್ತಮ ಉದ್ಯೋಗ ದೊರಕಿಸಿಕೊಡುವುದು ನಮ್ಮ ಸಂಸ್ಥೆಯ ಮುಖ್ಯ ಗುರಿಯಾಗಿದೆ" ಎಂದರು.




ಕಾರ್ಯಕ್ರಮದಲ್ಲಿ ಮುಖ್ಯಅತಿಥಿಗಳಾಗಿ ಬೆಂಗಳೂರಿನ ಡಾ.ರೆಡ್ಡೀಸ್ ಫೌಂಡೇಷನ್‌ನ ಉಪವ್ಯವಸ್ಥಾಪಕರಾದ ನಕೀರ್ ಅಹಮ್ಮದ್‌ರವರು "ವಿದ್ಯಾರ್ಥಿಗಳು ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು. ಆತ್ಮವಿಶ್ವಾಸ, ಕೌಶಲ, ಶ್ರದ್ಧೆ, ಸಮಯಪ್ರಜ್ಞೆಯ ಮೂಲಕ ಯಶಸ್ಸನ್ನು ಸಾಧಿಸಬಹುದು" ಎಂದರು.

ಈ ಬೃಹತ್ ಉದ್ಯೋಗ ಮೇಳಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್, ಶ್ರೀದೇವಿ ವೈದ್ಯಕೀಯ ನಿರ್ದೇಶಕರಾದ ಡಾ.ರಮಣ್ ಆರ್ ಹುಲಿನಾಯ್ಕರ್, ಟ್ರಸ್ಟಿಯಾದ ಅಂಬಿಕಾ ಎಂ ಹುಲಿನಾಯ್ಕರ್‌ರವರು ಶುಭ ಹಾರೈಸಿದರು.

ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಡಾ.ನರೇಂದ್ರ ವಿಶ್ವನಾಥ್‌ರವರು "ವಿದ್ಯಾರ್ಥಿಗಳ ವಿದ್ಯಾಭ್ಯಾಸದ ನಂತರ ತುಮಕೂರಿನಲ್ಲಿಯೇ ವಿವಿಧ ಕಂಪನಿಗಳಲ್ಲಿ ಉದ್ಯೋಗಕ್ಕೆ ಅವಕಾಶಗಳಿವೆ. ಸದರಿ ಉದ್ಯೋಗ ಮೇಳದಲ್ಲಿ ಬೆಂಗಳೂರು ಮತ್ತು ತುಮಕೂರಿನ ಹೆಸರಾಂತ ಕಂಪನಿಗಳು ಭಾಗವಹಿಸಿವೆ. ಅದರಲ್ಲಿ ವಿದ್ಯಾರ್ಥಿಗಳ ವಿದ್ಯಾರ್ಹತೆಗೆ ಅನುಗುಣವಾಗಿ ಅಂದರೆ ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಐ.ಟಿ.ಐ, ಡಿಪ್ಲೋಮ ಅಥವಾ ಯಾವುದೇ ಪದವಿ ಪಡೆದಿರುವವರಿಗೆ ಅವರ ಶೈಕ್ಷಣಿಕ ಮತ್ತು ಕೌಶಲದ ಆಧಾರದಲ್ಲಿ ಉದ್ಯೋಗಗಳು ಲಭಿಸುತ್ತವೆ" ಎಂದರು.

ಶ್ರೀದೇವಿ ಪದವಿ ಮತ್ತು ಸ್ನಾತಕೋತ್ತರ ಕೇಂದ್ರದ ಪ್ರಾಂಶುಪಾಲರಾದ ಮುಭಾರಕ್ ಅವರು "ಈ ಉದ್ಯೋಗ ಮೇಳದಲ್ಲಿ ಸುಮಾರು 35ಕ್ಕೂ ಹೆಚ್ಚಿನ ಕಂಪನಿಗಳು ಭಾಗವಹಿಸಿವೆ. ಸುಮಾರು 1500ಕ್ಕೂ ಹೆಚ್ಚು ಉದ್ಯೋಗ ಆಕಾಂಕ್ಷಿಗಳು ಈ ಮೇಳದಲ್ಲಿ ಭಾಗವಹಿಸಿರುವುದು ಶ್ರೀದೇವಿ ಶಿಕ್ಷಣ ಸಂಸ್ಥೆಗೆ ಹೆಮ್ಮೆಯ ವಿಷಯವಾಗಿದೆ" ಎಂದು ವಿವರಿಸಿದರು. ಪ್ರಾರಂಭದಲ್ಲಿ ಪ್ರೊ.ಮುಭಾರಕ್‌ರವರು ಸ್ವಾಗತಿಸಿದರು. ಪ್ರೊ.ಅಷಿಯಾಭಾನು ಅವರು ಕಾರ್ಯಕ್ರಮ ನಿರೂಪಿಸಿದರು. ಪ್ರೊ.ರಾಜರಾಜೇಶ್ವರಿರವರು ವಂದನಾರ್ಪಣೆ ಮಾಡಿದರು.

■ ವರದಿ: ಎನ್.ಆನಂದ

# ಅವಕಾಶ ವಂಚಿತ ಸಮುದಾಯಗಳ ಅಧ್ಯಯನ ಮತ್ತು ಸಂಘಟನೆ ಅಗತ್ಯ

▶▶ ಮೊದಲನೇ ಪುಟದಿಂದ...

ಈ ಸಮಾವೇಶದ ಮುಖ್ಯ ಅಕರ್ಷಣೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿರುವ ಸಿದ್ದರಾಮಯ್ಯ ಅವರು. ತಮ್ಮ ಹೋರಾಟದ ಬದುಕಿನಿಂದ ಅನೇಕರಿಗೆ ಸ್ಫೂರ್ತಿದಾಯಕವಾಗಿರುವುದಲ್ಲದೆ ಎರಡನೆಯ ಸಲ ರಾಜ್ಯದ ಮುಖ್ಯಮಂತ್ರಿಯಾಗಿ ಶೋಷಿತ ಸಮಾಜಗಳ ಭರವಸೆಯ ಬೆಳಕಾಗಿದ್ದಾರೆ.

"ಯಾವ ಸಮಾಜದವರು ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವವರೋ ಅಂತಹವರು ಸಂಘಟಿತರಾಗಿ ತಮ್ಮ ಮುಂದಿನ ಭವಿಷ್ಯದ ಕುರಿತು ಯೋಚಿಸುವ ಸಮಾವೇಶಗಳಿಂದ ಯಾವುದೇ ಅಪಾಯವಿಲ್ಲ. ಅವರ ಅಭ್ಯುದಯಕ್ಕೆ ಇಂತಹ ಸಮಾವೇಶಗಳು ಪೂರಕ" ಎಂದು ಡಾ.ರಾಮಮನೋಹರ ಲೋಹಿಯಾ ಅವರೇ ಹೇಳಿದ್ದಾರೆ.

ಅದೇ ಬಲಾಢ್ಯ ಸಮುದಾಯಗಳು ಮಾಡುವ ಇಂತಹ ಸಮಾವೇಶಗಳಲ್ಲಿ ತಮ್ಮ ಶಕ್ತಿ ಪ್ರದರ್ಶನ ಮತ್ತು ತಮಗಿರುವ ಜನಸಂಖ್ಯಾ ಬಾಹುಳ್ಯವನ್ನು ಪ್ರಭುತ್ವಕ್ಕೆ ತೋರಿಸಿ 'ನಮ್ಮನ್ನು ಕಡೆಗಣಿಸಿದರೆ ನಿಮಗೆ ಅಪಾಯ ತಪ್ಪಿದ್ದಲ್ಲ' ಎನ್ನುವ ಎಚ್ಚರಿಕೆ ಸಂದೇಶವಿರುತ್ತದೆ.

ಭಾರತದಂತಹ ಶ್ರೇಣೀಕೃತ ಸಮಾಜದಲ್ಲಿ 'ಜಾತಿ' ಎನ್ನುವುದು ತುಂಬ ಮುಖ್ಯ ಎನ್ನುವುದನ್ನು ಎಲ್ಲರೂ ಅಂತರಂಗದಲ್ಲಿ ಒಪ್ಪಿಕೊಳ್ಳುತ್ತಾರೆ. ಬಹಿರಂಗದಲ್ಲಿ 'ಜಾತೀಯತೆಯಿಂದ ದೇಶ ಹಾಳಾಗಿದೆ' ಎಂಬ ಸೋಗಲಾಡಿತನವನ್ನು ಪ್ರದರ್ಶಿಸುತ್ತಾರೆ. ಜಾತಿಯಿಂದ ನಮ್ಮ ಧರ್ಮದಲ್ಲಿ ಐಕ್ಯತೆ ಹಾಳಾಯಿತು ಎನ್ನುವವರು ಚುನಾವಣೆಯನ್ನು ಜಾತಿಯ ಆಧಾರ ಮೇಲೆ ನಡೆಸುತ್ತಾರೆ. ಅವರೆಲ್ಲಾ ವಾಸ್ತವದಲ್ಲಿ ಜಾತಿಯ ಲೆಕ್ಕಾಚಾರದಲ್ಲೇ ಮಾತನಾಡುವುದು.

ಇತ್ತೀಚೆಗೆ ಹಿರಿಯ ಶಾಸಕರೊಬ್ಬರು 'ನಮ್ಮ ಜಾತಿಯ ಅಧಿಕಾರಿಗಳಿಗೆ ನಾಯಿಪಾಡು ಬಂದಿದೆ' ಎಂದು ಬಹಿರಂಗವಾಗಿ ದೂರಿದರು. ಜಾತಿಯ ಮೇಲೆ ಅಧಿಕಾರಿಗಳನ್ನು ಏಕೆ ವಿಭಜಿಸುತ್ತೀರ ಎಂದು ಯಾರೂ ಅವರನ್ನು ಪ್ರಶ್ನೆ ಮಾಡಲಿಲ್ಲ. ಅದಕ್ಕೆ ಬದಲಾಗಿ ಶಾಸಕರೊಬ್ಬರು ರಾಜ್ಯದಲ್ಲಿ 31 ಜಿಲ್ಲಾಧಿಕಾರಿಗಳಿದ್ದಾರೆ, ಅದರಲ್ಲಿ ಲಿಂಗಾಯಿತರು 3, ಒಕ್ಕಲಿಗರು 6, ಕುರುಬರು 2, ಪರಿಶಿಷ್ಟ ಜಾತಿ ಮತ್ತು ವರ್ಗ 7, ಇತರೆ ಹಿಂದುಳಿದ ವರ್ಗ 4 ಹಾಗೂ ಇತರರು 9 ಎನ್ನುವ ಅಂಕಿಅಂಶವನ್ನು ಕೊಟ್ಟರು. ಇದನ್ನು ಸಮಾಜ ಸಹಜವೆನ್ನುವಂತೆ ಸ್ವೀಕರಿಸಿದೆ. ಯಾರಿಗೂ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಕಾರ್ಯಾಂಗವನ್ನು ಹೀಗೆ ಜಾತಿಯಿಂದ ವಿಭಜಿಸಬಾರದು ಎಂಬ ಪ್ರಜ್ಞೆ ಬರಲಿಲ್ಲ. ಎಲ್ಲರೂ ಜಾತಿ ಎನ್ನುವುದು ತುಂಬ ವಾಸ್ತವ, ಅದನ್ನಿಟ್ಟುಕೊಂಡೇ ಚಿಂತಿಸಬೇಕು ಎನ್ನುವ ತೀರ್ಮಾನಕ್ಕೆ ಬಂದಿರುತ್ತಾರೆ. ಆದರೆ ಅದನ್ನು ಯಾರೂ ಬಹಿರಂಗವಾಗಿ ಹೇಳುವುದಿಲ್ಲ.

ದೇಶದ ಎಲ್ಲಾ ರಾಜಕೀಯ ಪಕ್ಷಗಳು ಚುನಾವಣೆಯಲ್ಲಿ ಅಭ್ಯರ್ಥಿಗೆ ಟಿಕೇಟು ಕೊಡುವುದರಿಂದ ಹಿಡಿದು ಚುನಾವಣೆಯನ್ನು ನಡೆಸುವವರೆಗೆ ಜಾತಿಯನ್ನೇ ಆಧಾರವನ್ನಾಗಿಟ್ಟುಕೊಂಡಿರುತ್ತವೆ. ಆ ಕುರಿತ ನನ್ನ ಅನುಭವವೊಂದನ್ನು ಈ ಸಂದರ್ಭದಲ್ಲಿ ಹೇಳಿದರೆ ಈ ವಿಚಾರಕ್ಕೆ ಮತ್ತಷ್ಟು ಸ್ಪಷ್ಟತೆ ದೊರೆಯುತ್ತದೆ. ಬಹಳ ವರ್ಷಗಳಿಂದ ರಾಜಕೀಯಪಕ್ಷಗಳೊಂದಿಗೆ ನಂಟು ಹೊಂದಿದ್ದು ಚುನಾವಣಾ ರಾಜಕೀಯದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದೇನೆ. ಅನೇಕ ಪಕ್ಷಗಳ ಪರವಾಗಿ ಪ್ರಚಾರ ಮಾಡಿದ್ದೇನೆ. ಚುನಾವಣಾ ಸಂದರ್ಭದಲ್ಲಿ ಪಕ್ಷದ ನಾಯಕರು 'ಡಾಕ್ಟ್ರೇ ನೀವು ಈ ಕಡೆ ಹೋಗಿ, ಅಲ್ಲಿ ನಿಮ್ಮವರು ಇದ್ದಾರೆ' ಎನ್ನುತ್ತಾರೆ. ಇನ್ನು ಅಭ್ಯರ್ಥಿಗಳು ದೂರವಾಣಿ ಕರೆ ಮಾಡಿ 'ಸಾರ್, ನಾಳೆ ಇಲ್ಲಿಗೆ ಬನ್ನಿ, ನಿಮ್ಮವರಿದ್ದಾರೆ' ಎಂದು ಕರೆಯುತ್ತಾರೆ. ಅವರುಗಳಿಗೆ ನಾನು ಎಷ್ಟೋ ಸಲ ಹೇಳಿದ್ದೇನೆ. 'ನನ್ನ ಪೇಷೆಂಟ್‌ಗಳಲ್ಲಿ ಎಲ್ಲಾ ಜಾತಿಯ ಜನರಿದ್ದಾರೆ. ಅವರೆಲ್ಲಾ ನನ್ನೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿರುತ್ತಾರೆ. ಅವರ ಮೂಲಕ ಉಳಿದವರು ನನ್ನ ಅಭಿಮಾನಿಗಳಾಗಿರುತ್ತಾರೆ. ಅವರನ್ನು ನೋಡುತ್ತೇನೆ" ಎಂದರೆ, ರಾಜಕೀಯಪಕ್ಷ ಮತ್ತು ಅಭ್ಯರ್ಥಿಗಳು 'ಅದರಿಂದ ಪ್ರಯೋಜನವಿಲ್ಲ' ಎನ್ನುತ್ತಾರೆ. ದೇಶದ ರಾಜಕೀಯ ವ್ಯವಸ್ಥೆ ನಮ್ಮ ಜನರನ್ನು ಹೇಗೆ ಕೂಪಮಂಡೂಕರನ್ನಾಗಿ ಮಾಡಿದೆ ಎಂಬುದಕ್ಕೆ ಇದೊಂದು ಜ್ವಲಂತ ಉದಾಹರಣೆ ಕೊಡಬಹುದು.

ಭಾರತದಲ್ಲಿ ಜಾತಿ ಎನ್ನುವುದು ಅನಿವಾರ್ಯವಾದ ಸಂಗತಿ ಎನ್ನುವುದನ್ನು ಒಪ್ಪಿಕೊಂಡು, ತುಳಿತಕ್ಕೊಳಗಾದ ನೂರಾರು ಜಾತಿಯವರಿಗೆ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಸ್ಥಾನಮಾನವನ್ನು ಒದಗಿಸಿದರೆ ಅದೊಂದು ಬಹು ದೊಡ್ಡ ಕೊಡುಗೆಯಾಗುತ್ತದೆ.



ಭಾರತದಲ್ಲಿ ಒಂದು ಅಂದಾಜಿನ ಪ್ರಕಾರ 3000 ಜಾತಿಗಳಿವೆ. 25,000 ಉಪಜಾತಿಗಳಿವೆ. ಇದರಲ್ಲಿ ಬಹುಮಟ್ಟಿನ ಜಾತಿಯವರಿಗೆ ಕಳೆದ 75 ವರ್ಷಗಳಿಂದ ಯಾವುದೇ ಸೌಲಭ್ಯ ದೊರಕಿಲ್ಲ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ, ಅನೇಕ ಜಾತಿಯ ಜನಪ್ರತಿನಿಧಿಗಳು ವಿಧಾನಸೌಧದ ಮೆಟ್ಟಲು ಹತ್ತಿಲ್ಲ. ಅವಕಾಶ ದೊರೆತವರಿಗೇ ಮತ್ತೆ ಮತ್ತೆ ದೊರೆಯುತ್ತಿದೆ. ಅವರಿಗೆ ಶಾಸಕ ಸ್ಥಾನ ಹೋಗಲಿ ಸ್ಥಳೀಯ ಸಂಸ್ಥೆಗಳಲ್ಲೂ ಅವಕಾಶ ಸಿಕ್ಕಿಲ್ಲ. ಅವರ ಸಮುದಾಯದಲ್ಲಿ ಐ.ಎ.ಎಸ್. ಐ.ಪಿ.ಎಸ್. ಕೆ.ಎ.ಎಸ್. ಹಾಗೂ ಇತರ ನೌಕರಿಯಲ್ಲೂ ಅವರ ಸಮುದಾಯದ ಹೆಸರಿಲ್ಲ. ಅನೇಕ ಸಮುದಾಯಗಳು ಇನ್ನು ಕೂಲಿ ಕಾರ್ಮಿಕರ ಸ್ಥಿತಿಯಲ್ಲಿವೆ. ಸ್ವಾತಂತ್ರ್ಯ ಬಂದು 7 ದಶಕಗಳಾದರೂ ಅವರಿನ್ನೂ ಸಾಕ್ಷರರಾಗಿಲ್ಲ. ಇನ್ನು ಅವರ ಆರ್ಥಿಕ ಪರಿಸ್ಥಿತಿ ಹೇಗಿರುತ್ತದೆ ಎಂಬುದು ಊಹೆ ನಿಲುಕದ ವಿಚಾರ.

ಇಂತಹ ಸಮಸ್ಯೆಗಳನ್ನು ಪರಿಹರಿಸಲು ವೈಜ್ಞಾನಿಕವಾಗಿ ಚಿಂತಿಸಿ ಕಾರ್ಯಪ್ರವೃತ್ತರಾಗಬೇಕು. ಎಲ್ಲಾ ಜಾತಿಗಳ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಯನ್ನು ತಿಳಿದರೆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಾಧ್ಯ.

1881ರಲ್ಲಿ ಜನಗಣತಿ ಪ್ರಾರಂಭವಾಯಿತು. 1931ರಲ್ಲಿ ಜಾತಿಗಣತಿ ನಡೆದು ಅದರಲ್ಲಿ ಆಯಾ ಜಾತಿಯ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯ ಬಗ್ಗೆ ಅಮೂಲ್ಯ ಮಾಹಿತಿಗಳಿದ್ದವು. ಅಲ್ಲಿಂದ ಎಲ್ಲಾ ನಾಯಕರು ಆತ್ಮವಂಚನೆ ಮಾಡಿಕೊಳ್ಳುತ್ತಲೇ ಬಂದಿದ್ದಾರೆ. ಅನೇಕರು ತಮ್ಮ ಭವಿಷ್ಯವನ್ನು ನೆನೆದು ಜಾತಿಯ ಜನಗಣತಿಯನ್ನು ಮಾಡದೇ ತಟಸ್ಥರಾಗಿದ್ದಾರೆ. ಇವುಗಳಿಗೆ ಇತಿಶ್ರೀ ಹಾಡಿದ ಕೀರ್ತಿ ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರಿಗೆ ಸೇರುತ್ತದೆ. ಸ್ವತಂತ್ರ ದೇಶದಲ್ಲಿ ಮೊತ್ತ ಮೊದಲ ಭಾರಿಗೆ ಜಾತಿ ಜನಗಣತಿ ನಡೆಸಿ ಅದರ ಫಲಿತಾಂಶವನ್ನು ಹೊರಹಾಕಿದ್ದಾರೆ. ಆ ಫಲಿತಾಂಶವು ದೇಶದ ಮುಂದಿನ ಚರಿತ್ರೆ ಬರೆಯುವ ಆಕರವಾಗಬಹುದು.

ಬಿಹಾರದ ಒಟ್ಟು ಜನಸಂಖ್ಯೆ. 13.10ಕೋಟಿ ಅದರಲ್ಲಿ ಅತ್ಯಂತ ಹಿಂದುಳಿದ ಮತ್ತು ಹಿಂದುಳಿದ ವರ್ಗದವರು ಜನಸಂಖ್ಯೆಯಲ್ಲಿ ಶೇಕಡ 63ರಷ್ಟಿದ್ದಾರೆ. ಪರಿಶಿಷ್ಟ ಜಾತಿ ಮತ್ತು ವರ್ಗದವರು ಶೇಕಡ 22ರಷ್ಟಿದ್ದಾರೆ. ಸಾಮಾನ್ಯ ವರ್ಗದವರು ಶೇಕಡ 15.22ರಷ್ಟಿದ್ದಾರೆ. ಪ್ರತಿಯೊಂದು ಜಾತಿಯ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ವಿವರಗಳನ್ನು ಬಿಹಾರದ ಜಾತಿ ಜನಗಣತಿ ವರದಿ ನೀಡುತ್ತದೆ. ಈ ಅಂಕಿ ಅಂಶಗಳ ಆಧಾರದ ಮೇಲೆ ಅವರುಗಳಿಗೆ ರಾಜಕೀಯ ಅಧಿಕಾರ ಮತ್ತು ಸರ್ಕಾರಿ ಸವಲತ್ತುಗಳು ದೊರೆಯಬೇಕಾಗುತ್ತದೆ. ಈಗಾಗಲೇ ಎಲ್ಲ ಸೌಲಭ್ಯ ಪಡೆದವರು ಬೇರೆಯವರಿಗೆ ಅವಕಾಶ ಮಾಡಿಕೊಟ್ಟು, ಮುಖ್ಯವಾಹಿನಿಯಿಂದ ಹಿಂದೆ ಸರಿಯುವ ಸ್ಥಿತಿ ಬರಬಹುದು. ಇಂತಹ ಅಧ್ಯಯನಗಳು ಎಲ್ಲಾ ಶೋಷಿತ ಸಮಾಜಕ್ಕೆ ಶಕ್ತಿ ಮತ್ತು ಚೈತನ್ಯವನ್ನು ತುಂಬಬಹುದು.

ಕರ್ನಾಟಕ ರಾಜ್ಯದಲ್ಲಿ 2013ರಲ್ಲಿ ಸಿದ್ದರಾಮಯ್ಯ ಅವರು ಮೊದಲ ಸಲ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಜಾತಿ ಜನಗಣತಿ ನಡೆಸುವ ಕಾರ್ಯಕ್ಕೆ ಚಾಲನೆ ಸಿಕ್ಕಿತ್ತು. ಈಗಾಗಲೇ ವರದಿ ಸಿದ್ಧವಾಗಿದೆ ಎಂದು ಮಾಧ್ಯಮಗಳು ಕಳೆದ ನಾಲ್ಕೈದು ವರ್ಷದಿಂದ ಹೇಳುತ್ತಿವೆ. ಆ ವರದಿ ಸ್ವೀಕರಿಸಿ ಅದರ ಫಲಿತಾಂಶಗಳನ್ನು ಜನಸಾಮಾನ್ಯರಿಗೆ ಬಿಡುಗಡೆ ಮಾಡುತ್ತಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ನಿರೀಕ್ಷಿಸಬಹುದೇ?

■ ನಿರೂಪಣೆ: ಶ್ರೀವತ್ಸ

# ದೇವಿ ಅಭಯವೊಂದಿದ್ದರೆ ಸಾಕು

ಅರ್ಚನೆ



**ಶಾಂತಾದುರ್ಗಾದೇವಿ ಹುಲಿನಾಯ್ಕರ್**
**ಮ್ಯಾನೇಜಿಂಗ್ ಟ್ರಸ್ಟಿ**
**ಶ್ರೀ ದುರ್ಗಾಂಬಿಕಾದೇವಿ ದೇವಸ್ಥಾನ**

"ದೇವಿ ಭಾಗವತದಲ್ಲಿ ಬರುವ ಶ್ಲೋಕದ ಕನ್ನಡ ಅರ್ಥವನ್ನು ತಿಳಿದರೆ ದೇವಿಯ ಮಹತ್ವ ತಿಳಿಯುತ್ತದೆ. ಅದು ಹೀಗಿದೆ. "ಯಾರ ಆರಾಧನೆಯನ್ನು ಮಾಡಿ ಜಗತ್ತಿನ ಸೃಷ್ಟಿಕರ್ತನಾದನೋ, ಯಾರು ಆರಾಧನೆಯನ್ನು ಮಾಡಿ ಜಗತ್ತಿನ ಪಾಲಕನಾದನೋ, ಯಾರು ಆರಾಧನೆಯನ್ನು ಮಾಡಿ ಜಗತ್ತಿನ ಲಯಕಾರನಾದನೋ, ಯೋಗಿ ಜನರು ಯಾರನ್ನು ಧ್ಯಾನ ಮಾಡುವರೋ, ತತ್ತ್ವಾರ್ಥ ಚಿಂತಕರು ಯಾರನ್ನು ಮೂಲ ಪ್ರಕೃತಿ ಎಂದು ಕರೆದರೋ ಮತ್ತು ಯಾರು ಸ್ವರ್ಗ, ಮೋಕ್ಷಗಳನ್ನು ಪ್ರದಾನ ಮಾಡುವರೋ ಆ ಜಗಜ್ಜನನಿಗೆ ನಾನು ನಮಸ್ಕರಿಸುತ್ತೇನೆ."

ಹದಿನೆಂಟು ಪುರಾಣಗಳನ್ನು ರಚಿಸಿದ ವೇದವ್ಯಾಸರಿಗೆ ಕಲಿಯುಗದಲ್ಲಿ ಜನಸಾಮಾನ್ಯರು ಬೇಗ ಒಲಿಸಿಕೊಳ್ಳಲು ಸಹಾಯಕವಾಗುವ ದೇವಿಯ ಮಹಿಮೆಯನ್ನು ತಿಳಿಸಲು ಮನಸ್ಸಾಯಿತು. ಇದಕ್ಕಾಗಿ ಹಿಮಾಲಯದಲ್ಲಿ ತಪಸ್ಸು ಮಾಡುತ್ತಿದ್ದ ವೇದವ್ಯಾಸರನ್ನು ಭಗವತಿ 'ನೀನು ಬ್ರಹ್ಮಲೋಕಕ್ಕೇ ಹೋಗು' ಎಂದು ಆದೇಶ ಮಾಡುತ್ತಾಳೆ.

ಅಲ್ಲಿ ಅವರು ಬ್ರಹ್ಮನಿಗೆ ನಮಸ್ಕಾರ ಮಾಡಿ, ಅವಿನಾಶಿಯಾದ ಬ್ರಹ್ಮಪದವಿಯ ಬಗ್ಗೆ ಬ್ರಹ್ಮನಲ್ಲಿ ಜಿಜ್ಞಾಸೆ ಮೂಡಿಸಿದರು. ಅವರು ಧ್ಯಾನಸ್ಥರಾಗಿದ್ದಾಗ ಜ್ಯೋತಿಸ್ವರೂಪಿಣಿಯಾದ ಜಗದಾಂಬ ಪ್ರತ್ಯಕ್ಷಳಾದಳು. ಸಹಸ್ರ ಸೂರ್ಯರ ಕಾಂತಿ ಹಾಗೂ ಕೋಟಿ ಶೀತಲ ಚಂದ್ರ ಅಡಕವಾಗಿದ್ದ. ಆಕೆ ಸಹಸ್ರ ಹಸ್ತಗಳಲ್ಲಿ ವಿವಿಧ ಆಯುಧಗಳನ್ನು ಧಾರಣೆ ಮಾಡಿದ್ದಳು. ದಿವ್ಯ ಆಭರಣಗಳಿಂದ ಅಲಂಕೃತಳಾಗಿದ್ದಳು. ಅನೇಕ ರೂಪಗಳನ್ನು ಆಕೆ ತಾಳಿದಳು. ವಿಷ್ಣುರೂಪ ತಳೆದು ವಾಮಭಾಗದಲ್ಲಿ ಶ್ರೀಲಕ್ಷ್ಮೀಯಾಗಿ ಕಂಗೊಳಿಸುತ್ತಿದ್ದಳು. ಕೆಲವೊಮ್ಮೆ ರಾಧಾ ಸಹಿತ ಕೃಷ್ಣನ ರೂಪ ತಳೆಯುತ್ತಿದ್ದಳು. ಮತ್ತೇ ಕೆಲವು ಸಲ ಬ್ರಹ್ಮನ ರೂಪ ತಳೆದು ಆತನ ವಾಮಭಾಗದಲ್ಲಿ ಆಕೆ ಸರಸ್ವತಿಯಾಗಿ ಗೋಚರಿಸುತ್ತಿದ್ದಳು. ಕೊನೆಗೆ ಶಿವನ ರೂಪವನ್ನು ಧಾರಣ ಮಾಡಿ ಆತನ ವಾಮಭಾಗದಲ್ಲಿ ಗೌರಿರೂಪದಲ್ಲಿರುತ್ತಿದ್ದಳು. ಹೀಗೆ ಸರ್ವವ್ಯಾಪಿಯಾಗಿ ಬ್ರಹ್ಮಸ್ವರೂಪಿಣಿ ಭಗವತಿ ವೇದವ್ಯಾಸರಿಗೆ ದರ್ಶನ ಕೊಟ್ಟು ಅವರ ಸಂಶಯವನ್ನು ನಿವಾರಣೆ ಮಾಡಿದಳು.


ದೇವಿಯ ಪ್ರತ್ಯಕ್ಷ ದರ್ಶನವನ್ನು ಮಾಡಿ ಆಕೆ ಪರಬ್ರಹ್ಮ ಸ್ವರೂಪಿಣಿ ಎಂಬ ಸತ್ಯವನ್ನು ವೇದವ್ಯಾಸರು ಮನವರಿಕೆ ಮಾಡಿಕೊಂಡರು. ದೇವಿ ವೇದವ್ಯಾಸರಿಗೆ ತನ್ನ ಚರಣತಲದಲ್ಲಿ ಸಹಸ್ರದಳಕಮಲದ ದರ್ಶನ ಮಾಡಿಸಿದಳು. ಸಹಸ್ರ ಎಲೆಗಳ ಮೇಲೆ ದೇವಿಪುರಾಣ ಬರೆಯಲ್ಪಟ್ಟಿತ್ತು. ಅದನ್ನು ವೇದವ್ಯಾಸರು ತಮ್ಮ ಶಿಷ್ಯರಿಗೆ ಬೋಧಿಸಿದರು.

ಭಾರತದಲ್ಲಿ ದೇವಿಯ ಆರಾಧನೆ ಎಲ್ಲ ಭಾಗಗಳಲ್ಲೂ ಕಂಡುಬರುತ್ತದೆ. ಪಶ್ಚಿಮ ಬಂಗಾಳದಲ್ಲಿ ಕಾಳಿಪೂಜೆ ಅತ್ಯಂತ ವೈಭವದಿಂದ ನಡೆಯುತ್ತದೆ. ಕಾಶ್ಮೀರದಲ್ಲಿ ವೈಷ್ಣವಿದೇವಿ ಆರಾಧನೆ ನಡೆಯುತ್ತದೆ. ಅಸ್ಸಾಂನ ಗುವಾಹಟಿಯಲ್ಲಿನ ಕಾಮಾಕ್ಯ ದೇವತೆಗೆ ಮತ್ತು ದಕ್ಷಿಣದಲ್ಲಿ ಶ್ರೀ ಶಾರದಾಮಾತೆಗೆ ನೂರಾರು ವರ್ಷಗಳ ಇತಿಹಾಸವಿದೆ. ಮೊದಲಿಗೆ ಮನುಷ್ಯ ಮಾತೃದೇವತೆಯ ಮೂಲಕ ದೇವತಾರಾಧನೆ ಪ್ರಾರಂಭ ಮಾಡಿದ್ದಾನೆ.

## ನಮ್ಮ ಮನೆಯಲ್ಲಿ ದೇವಿಗೆ ಪ್ರಥಮ ಸ್ಥಾನ

ಶುಕ್ರವಾರ (ಸೆಪ್ಟೆಂಬರ್–6) ಶ್ರೀದೇವಿ ಶಿಕ್ಷಣ ಸಂಸ್ಥೆಯ ಆವರಣದಲ್ಲಿರುವ ಶ್ರೀದುರ್ಗಾಂಬಿಕಾದೇವಿಯ ಅರ್ಚಕರು ಫೋನ್ ಮಾಡಿ 'ಅಮ್ಮಾ ನವರಾತ್ರಿ ಸಮೀಪಿಸುತ್ತಿದೆ. ನವರಾತ್ರಿ ಹಬ್ಬದ ಆಚರಣೆಗೆ ಪ್ಲಾನ್ ಮಾಡೋಣ ತಾವು ಬನ್ನಿ' ಎಂದರು. ಅದರಂತೆ ಅಲ್ಲಿಗೆ ಹೋದೆ. ದೇವಿಗೆ ನಮಸ್ಕರಿಸಿ ಗರ್ಭಗುಡಿಯ ಆಚೆ ಹಾಕಿದ್ದ ಕುರ್ಚಿಯ ಮೇಲೆ ಕುಳಿತೆ. ಮನಸ್ಸು ದೇವಿಯ ಮೇಲೆ ನೆಟ್ಟಿತು.

ದೇವಿ ಎಂದಿನಂತೆ ಥಳಥಳಿಸುತ್ತಿದ್ದಳು. ಅಂದು ಶುಕ್ರವಾರ ಬೇರೆ. ಮತ್ತಷ್ಟು ಆಕರ್ಷಕವಾಗಿ ಕಾಣುತ್ತಿದ್ದಾಳೆ. ಆಕೆಯ ಮೂಗಿನ ನತ್ತು ಇಡೀ ಪರಿಸರವನ್ನು ಬೆಳಗುತ್ತಿದೆ. ಹಸಿರು ಸೀರೆಯ ಮೇಲಿದ್ದ ಬೆಳ್ಳಿಯ ಡಾಬು, ಕಿರೀಟ, ಅಭಯ ಹಸ್ತ, ಕಣ್ಣಿನಲ್ಲಿನ ಕಾಂತಿ, ದುಷ್ಟ ನಿಗ್ರಹಕ್ಕಿದ್ದ ತ್ರಿಶೂಲ, ಸಿಂಹಾರೂಢಳಾಗಿರುವ ದೇವಿ ಎದ್ದು ಬರುತ್ತಾಳೋ ಎನ್ನುವಂತೆ ಕಾಣಿಸುತ್ತಿದ್ದಾಳೆ. ಆಕೆಯನ್ನು ಎಷ್ಟು ನೋಡಿದರೂ ತೃಪ್ತಿಯಿಲ್ಲ.



**ಶ್ರೀದೇವಿ ಶಿಕ್ಷಣ ಸಂಸ್ಥೆಯ ಆವರಣದಲ್ಲಿರುವ ಶ್ರೀ ದುರ್ಗಾಂಬಿಕಾ ದೇವಿ**

ಹಿಂದಿನ ರಾತ್ರಿ ಭಾರತಿ ಅವರು ದೂರವಾಣಿ ಕರೆ ಮಾಡಿ 'ಅಮ್ಮಾ ಈ ತಿಂಗಳ 'ಶ್ರೀದೇವಿ ಅಂತರಂಗ' ಪತ್ರಿಕೆಗೆ ನೀವು ನವರಾತ್ರಿಗೆ ಪೂಜೆ ಮಾಡುತ್ತಿದ್ದುದನ್ನು ಬರೆಯೋಣ, ಓದುಗರು ಇಷ್ಟಪಡುತ್ತಾರೆ' ಎಂದಿದ್ದರು. ಅವರ ಮಾತುಗಳು ಕಿವಿಯಲ್ಲಿ ಗುಂಯ್‌ಗುಡುತ್ತಿದ್ದವು.

ನಾನು ದೆಹಲಿಯಿಂದ ಡಾ.ಹುಲಿನಾಯ್ಕರ್ ಅವರನ್ನು ಮದುವೆಯಾಗಿ ನವಲಗುಂದಕ್ಕೆ ಬಂದ ತಕ್ಷಣ ನಮಗೆ ಅವಧೂತರಾದ ಪೂಜ್ಯ ಹುರಕಡ್ಲಿ ಅಜ್ಜ ಅವರು ದೇವಿಯ ಪೂಜಾಕೈಂಕರ್ಯವನ್ನು ಕೊಟ್ಟರು. ನವರಾತ್ರಿಯ ದಿನಗಳಲ್ಲಿ ಮತ್ತಷ್ಟು ಶ್ರದ್ಧೆ ಮತ್ತು ಭಕ್ತಿಯಿಂದ ದೇವಿಯ ಪೂಜೆ ಮಾಡುವಂತೆ ಕಿವಿ ಮಾತು ಹೇಳಿದ್ದರು. ಅವರೇ ನವರಾತ್ರಿ ಸಂದರ್ಭದಲ್ಲಿ ವಿಶೇಷವಾದ ಪೂಜೆ ಮಾಡುತ್ತಿದ್ದರು. ಮಧ್ಯಾಹ್ನ ಒಂದು ಘಂಟೆಗೆ ಪ್ರಾರಂಭವಾದ ಪೂಜೆ ಬೆಳಗಿನ ಜಾವದ ತನಕ ಮುಂದುವರಿದ ದಿನಗಳಿವೆ. ನಾವು ಅನೇಕ ಸಲ ಅಲ್ಲಿನ ನವರಾತ್ರಿ ಪೂಜೆಗೆ ಹೋಗಿದ್ದೇವೆ.

ಕಳೆದ ಮೂವತ್ತು ವರ್ಷಗಳಿಂದ ನಮ್ಮ ಕುಟುಂಬ ದೇವಿಯ ಪೂಜೆಯನ್ನು ಮಾಡುತ್ತಾ ಬಂದಿದೆ. ಓಹೊ! ದೇವಿಯ ಪೂಜೆ ಮಾಡುವುದು, ಪೂಜೆಗೆ ಅಣಿ ಮಾಡುವುದು, ಬೆಳಗಿನಿಂದ ಉಪವಾಸವಿದ್ದು, ದೇವಿಗೆ ಅಭಿಷೇಕ ಮಾಡುವುದು, ದೇವಿಯ ಭಾಗವತ ಕೇಳುವುದು, ಅತಿಥಿಗಳ ಜೊತೆ ಪ್ರಸಾದ ಸ್ವೀಕರಿಸುವುದು ಮೊದಲಾದ ಕ್ರಿಯೆಗಳಿಂದ ಮನೆಯ ಗೃಹಿಣಿಗೆ ಕಳೆದ ಹೋದ ಶಕ್ತಿ ಮರಳಿ ಬರುವುದುಂಟು.

ನವರಾತ್ರಿ ಸಂದರ್ಭದಲ್ಲಿ ಡಾ.ಹುಲಿನಾಯ್ಕರ್ ಒಂಬತ್ತು ದಿನಗಳ ಕಾಲವೂ ಉಪವಾಸವಿರುತ್ತಿದ್ದರು. ಆ ಸಂದರ್ಭದಲ್ಲೇ ಪೇಷೆಂಟ್‌ಗಳ ಸಂಖ್ಯೆಯೂ ಅಧಿಕ. ನಮ್ಮ ಶ್ರೀದೇವಿ ನರ್ಸಿಂಗ್ ಹೋಂನಲ್ಲಿ ಮಾತ್ರವಲ್ಲ ತುಮಕೂರಿನ ಬೇರೆ ಬೇರೆ ನರ್ಸಿಂಗ್ ಹೋಂಗಳವರೂ ಇವರನ್ನು ಆಪರೇಷನ್ ಮಾಡಲು ಕರೆಯುತ್ತಿದ್ದರು. ಇವರು ಆಪರೇಷನ್ ಥಿಯೇಟರ್‌ಗೆ ನೇರವಾಗಿ ಹೋಗುತ್ತಿದ್ದರು. ಅಲ್ಲಿದ್ದ ಪೇಷೆಂಟ್‌ನ ಸಹಾಯಕರು ಅಥವಾ ಬೇರೆಯವರು ನೋಡಿದರೆ ಆ ನರ್ಸಿಂಗ್ ಹೋಂ ಕುರಿತು ಅವರಿಗೆ ಬೇರೆ ಅಭಿಪ್ರಾಯ ಮೂಡಬಹುದು ಎಂಬ ಜಾಗೃತ ಪ್ರಜ್ಞೆ ಇವರದು. ಎಷ್ಟೋ ಸಂದರ್ಭದಲ್ಲಿ ತುಂಬ ತಡವಾಗಿ ಮನೆಗೆ ಬರುತ್ತಿದ್ದರು. ನನಗೆ ಪೇಷೆಂಟ್‌ಗೆ ಉಪಚರಿಸುವುದೇ ದೊಡ್ಡ ಪೂಜೆ ಎಂಬ ಭಾವನೆ ಸಹ ಇತ್ತು.

ನಮ್ಮ ಯಜಮಾನರು ಬಂದ ಮೇಲೆ ಸ್ನಾನಾದಿ ಪೂಜೆಗಳು ನಡೆಯುತ್ತಿದ್ದವು. ಹುರಕಡ್ಲಿ ಅಜ್ಜ ಅವರಿಂದ ಬಂದಿದ್ದ ಬಗಳಾಂಬಿಕಾದೇವಿಯ ಅಷ್ಟೋತ್ತರ ಮತ್ತು ಶತಕಗಳನ್ನು ಇವರು ಹೇಳುತ್ತಿದ್ದರು. ಬೆಳಗಿನಿಂದ ಉಪವಾಸವಿದ್ದು ದೇವಿಯ ಪೂಜೆಗೆ ಅಣಿಗೊಳಿಸುತ್ತಿದ್ದೆ. ಮಲ್ಲಿಗೆ, ಜಾಜಿ, ಸಂಪಿಗೆ, ತಾವರೆ, ಕೇಪುಳ, ಸೇವಂತಿಗೆ, ಕನಕಾಂಬರ, ಸುಗಂಧರಾಜ, ಗುಲಾಬಿ ಮತ್ತು ವಿವಿಧ ಪತ್ರೆಗಳಿಂದ ದೇವಿಯನ್ನು ಪೂಜಿಸುತ್ತಿದ್ದೆವು. ಇಂತಹ ಪೂಜೆ ಮಾಡಲು ಹಲವು ಜನ್ಮದ ಪುಣ್ಯ ಬೇಕು ಎಂಬುದೇ ನನ್ನ ಭಾವನೆ. ಪ್ರತಿದಿನ ದೇವಿಯ ಭಾಗವತ ಓದುತ್ತಿದ್ದರೆ, ದೇವಿಯೇ ನಮ್ಮ ಕಣ್ಣ ಮುಂದೆ ಪ್ರತ್ಯಕ್ಷಳಾದಂತೆ ಭಾಸವಾಗುತ್ತಿತ್ತು. ನಂತರ ಮಹಾಮಂಗಳಾರತಿ ನಡೆಯುತ್ತಿತ್ತು.

ನವರಾತ್ರಿ ಸಂದರ್ಭದಲ್ಲಿ ಒಂಬತ್ತು ದಿನವೂ ದೇವಿಗೆ ಒಬ್ಬಟ್ಟಿನ ನೈವೇದ್ಯವಾಗುತ್ತದೆ. ಜೊತೆಗೆ ಅನೇಕ ಬಗೆಯ ಹಣ್ಣುಗಳಿರುತ್ತವೆ. ಈಗ ನೆನೆದರೆ ನನಗೆ ಆಶ್ಚರ್ಯವಾಗುತ್ತದೆ. ನಾವು ಯಾರಿಗೂ ಹೇಳದಿದ್ದರೂ ಪ್ರತಿದಿನ ನಮ್ಮ ಮನೆಗೆ ಅತಿಥಿಗಳು ಬಂದು ದೇವಿಯ ಪ್ರಸಾದವನ್ನು ಸ್ವೀಕರಿಸುತ್ತಿದ್ದರು.

ಆಗ ನಮಗೆ ಬೆಳಗಿನಿಂದ ರಾತ್ರಿ ತನಕ ಉಪವಾಸವಿದ್ದು ಎಷ್ಟೇ ಕೆಲಸ ಮಾಡಿದರೂ ಆಯಾಸವಾಗುತ್ತಿರಲಿಲ್ಲ. ಎಷ್ಟೋ ಸಂದರ್ಭದಲ್ಲಿ ತುರ್ತು ವೈದ್ಯಕೀಯ ಪರಿಸ್ಥಿತಿ ಬರುತ್ತಿತ್ತು. ಏನೂ ಮಾಡುವುದು ಎಂದು ಕ್ಷಣಕಾಲ ಮನಸ್ಸಿಗೆ ಆತಂಕವಾದರೂ ತಕ್ಷಣ ಪರಿಹಾರ ದೊರಕಿ ಪೂಜಾ ಕಾರ್ಯ ನಿರ್ವಿಘ್ನವಾಗಿ ಜರುಗುತಿತ್ತು. ಉಪವಾಸ ಕಾಲದಲ್ಲಿ ಸುಸ್ತು ಆಗಲಿ ಬಾಯಾರಿಕೆಯಾಗಲಿ ಇರುವುದಿಲ್ಲ. ದೇವಿಯನ್ನು ಧ್ಯಾನಿಸುತ್ತಿದ್ದರೆ ಜಗತ್ತು ತಟಸ್ಥವಾಗಿರುತ್ತಿತ್ತು.

ನಮಗೆ ಲೌಕಿಕವಾದ ಸಂಪತ್ತನ್ನು ಆಕೆ ಯಥೇಚ್ಛವಾಗಿ ಕೊಟ್ಟಿದ್ದಾಳೆ. ಅದಕ್ಕಿಂತ ದೊಡ್ಡ ಅಧ್ಯಾತ್ಮದ ಅರಿವನ್ನು ದಯಪಾಲಿಸಿದ್ದಾಳೆ. ಡಾ.ಹುಲಿನಾಯ್ಕರ್ ಅವರು ಯಾವುದೇ ಕೆಲಸ ಮಾಡಲಿ ಅದರಲ್ಲಿ ಯಶಸ್ಸು ಪಡೆಯುತ್ತಾರೆ ಎಂಬುದು ಜನಜನಿತವಾದ ಅಭಿಪ್ರಾಯ. ಅನೇಕ ಹೊಸ ಯೋಜನೆಗಳನ್ನು ರೂಪಿಸಿ ಯಶಸ್ಸು ಪಡೆದಿದ್ದೇವೆ. ಅದಕ್ಕೆಲ್ಲಾ ಶ್ರೀದೇವಿಯೇ ಶ್ರೀರಕ್ಷೆ.

2008ರಲ್ಲಿ ಇವರಿಗೆ ಬೈಪಾಸ್ ಸರ್ಜರಿ ಆಯ್ತು. ನವರಾತ್ರಿ ಆಚರಣೆಯ ದೀಕ್ಷೆಯನ್ನು ಮಗ ಡಾ.ರಮಣ ಮತ್ತು ಡಾ.ಲಾವಣ್ಯ ಅವರುಗಳು ವಹಿಸಿಕೊಂಡಿದ್ದಾರೆ. ಅವರು ಸಹ ನವರಾತ್ರಿ ಆ ದಿನಗಳಲ್ಲಿ ಉಪವಾಸವಿದ್ದು, ಶ್ರದ್ಧೆಯಿಂದ ವ್ರತಾಚರಣೆ ಮಾಡುತ್ತಿದ್ದಾರೆ. ನನ್ನ ಮಕ್ಕಳು ವೈದ್ಯರು, ಅಳಿಯಂದಿರು ಮತ್ತು ಸೊಸೆ ವೈದ್ಯರು. ಒಬ್ಬ ಮಗಳು ಮತ್ತು ಅಳಿಯ ಇಂಜಿನಿಯರ್. ಎಲ್ಲರಿಗೂ ದೇವಿಯಲ್ಲಿ ಅಚಲವಾದ ಭಕ್ತಿ ಮತ್ತು ನಿಷ್ಠೆಯಿದೆ. ಅದು ಅತ್ಯಂತ ಸಮಾಧಾನದ ವಿಚಾರ.

ಶ್ರೀದೇವಿ ಶಿಕ್ಷಣ ಸಂಸ್ಥೆಯ ಆವರಣದಲ್ಲಿ 2020ರಿಂದ ಶ್ರೀ ದುರ್ಗಾಂಬಿಕಾ ದೇವಿ ನೆಲೆಸಿದ್ದಾಳೆ. ಆಕೆ ಪೂಜಾಕಾರ್ಯಗಳು ಶಾಸ್ತ್ರೋಕ್ತವಾಗಿ ನಡೆಯುತ್ತಿವೆ. ಅದನ್ನು ನೋಡುವುದೇ ಬದುಕಿನ ಬಹು ದೊಡ್ಡ ಭಾಗ್ಯ.

## ನವರಾತ್ರಿ ಹಬ್ಬ

ನವರಾತ್ರಿ ಹಿಂದೂಗಳ ಪವಿತ್ರ ಹಬ್ಬ. ಇದನ್ನು ದಸರಾ ಎಂದು ಸಹ ಕರೆಯುತ್ತಾರೆ. ಮೈಸೂರಿನ ದಸರಾದಲ್ಲಿ ಶ್ರೀಚಾಮುಂಡೇಶ್ವರಿತಾಯಿಯನ್ನಿಟ್ಟು ವೈಭವದಿಂದ ಮೆರವಣಿಗೆ ಮಾಡುತ್ತಾರೆ. 'ಶರನ್ನವರಾತ್ರಿ' 'ಚೈತ್ರ ನವರಾತ್ರಿ' ಎಂದು ಎರಡು ವಿಧದ ನವರಾತ್ರಿ ಆಚರಣೆಗಳಿವೆ. ನಾವು ಶರನ್ನವರಾತ್ರಿಯನ್ನು ಆಚರಣೆ ಮಾಡುತ್ತೇವೆ. ಒಂಬತ್ತು ದಿನಗಳ ಪೂಜೆಯನ್ನು ಈ ರೀತಿ ಮಾಡುತ್ತಾರೆ.

1 ಮೊದಲ ದಿನ ಅಂದರೆ ಪಾಡ್ಯದ ದಿನ **ಯೋಗನಿದ್ರಾ ದುರ್ಗಾ ಪೂಜಾ.**
2. ಎರಡನೇ ದಿನ ಅಂದರೆ ಬಿದಿಗೆ ದಿನ **ದೇವಜಾತ ದುರ್ಗಾಪೂಜಾ.**
3. ಮೂರನೇ ದಿನ ತದಿಗೆ – **ಮಹಿಷಾಸುರ ಮರ್ದಿನಿ ದುರ್ಗಾಪೂಜಾ.**
4. ನಾಲ್ಕನೇ ದಿನ ಚತುರ್ದಶಿ – **ಶೈಲ ಜಾತಾ ದುರ್ಗಾಪೂಜಾ.**
5. ಐದನೇ ದಿನ ಪಂಚಮಿ – **ದೂಮ್ರಹಾ ದುರ್ಗಾಪೂಜಾ.**
6. ಆರನೇ ದಿನ ಶಷ್ಠಿ – **ಚಂಡ–ಮುಂಡ ಹಾ ದುರ್ಗಾಪೂಜಾ.**
7. ಏಳನೇ ದಿನ ಸಪ್ತಮಿ – **ರಕ್ತ ಬೀಜ ಹಾ ದುರ್ಗಾಪೂಜಾ.**
8. ಎಂಟನೇ ದಿನ ಅಷ್ಟಮಿ – **ನಿಶುಂಭ ಹಾ ದುರ್ಗಾಪೂಜಾ. (ದುರ್ಗಾಷ್ಟಮಿ)**
9. ಒಂಬತ್ತನೇ ದಿನ ಮಹಾನವಮಿ – **ಶುಂಭ ಹಾ ದುರ್ಗಾಪೂಜಾ.**

ದೇವಿಯನ್ನು 'ಕಾಲರಾತ್ರಿ' ಎಂದು ಸಹ ಕರೆಯುತ್ತಾರೆ. ಅಂದರೆ ಕಾಲಪುರುಷನಲ್ಲಿ ಬದಲಾವಣೆ ಮಾಡಲು ಸಮರ್ಥಳು ಎಂದರ್ಥ. ದೇವಿಯ ಒಂಬತ್ತು ಅವತಾರಗಳು ಹೀಗಿವೆ. 1 ಶೈಲಪುತ್ರಿ 2 ಬ್ರಹ್ಮಚಾರಿಣಿ 3 ಚಂದ್ರಘಂಟಾ 4 ಕೂಷ್ಮಾಂಡಾ 5 ಸ್ಕಂದಮಾತಾ 6 ಕಾತ್ಯಾಯಿನಿ 7 ಕಾಳರಾತ್ರಿ 8 ಮಹಾಗೌರಿ 9 ಸಿದ್ಧಿರಾತ್ರಿ

ನವರಾತ್ರಿಯ ಕೊನೆಯ ದಿನ ವಿಜಯದಶಮಿ. ಶ್ರೀರಾಮ ರಾವಣನನ್ನು ಸಂಹರಿಸಿದ ದಿನ. ಪಾಂಡವರು ಅಜ್ಞಾತವಾಸ ಮುಗಿಸಿದ ಪಾರ್ಥನು ಕೌರವರಿಂದ ಗೋವುಗಳನ್ನು ಬಿಡಿಸಿದ ದಿನವೂ ಹೌದು!.

ಜಗತ್ತಿನಲ್ಲಿ ನಿರಂತರವಾಗಿ ಅಸುರೀಶಕ್ತಿಗಳು ಸಾತ್ವಿಕ ಶಕ್ತಿಯ ಮೇಲೆ ದಾಳಿ ಮಾಡುತ್ತಿರುತ್ತದೆ. ಧರ್ಮನಿಷ್ಠ ಜನರನ್ನು ರಕ್ಷಿಸುವುದಕ್ಕಾಗಿ ದೇವಿ ಅವತಾರ ಎತ್ತಿದಳು ಎಂದು ದೇವಿಭಾಗವತ ಹೇಳುತ್ತದೆ. ಭೂಮಿ ನಿರಂತರವಾಗಿ ಸುತ್ತುತ್ತಿರುವುದರಿಂದ ಹಗಲು, ರಾತ್ರಿಗಳು ಆಗುತ್ತವೆ. ವ್ರತ, ಉಪವಾಸ ಮತ್ತು ಧ್ಯಾನ ನಮಗೆ ಭೌತಿಕ ಶರೀರ ಮತ್ತು ಮನಸ್ಸಿನ ಮೇಲೆ ನಿಯಂತ್ರಣ ಸಾಧಿಸಲು ಸಹಾಯ ಮಾಡುತ್ತವೆ. ಮಾನಸಿಕ ಮತ್ತು ದೈಹಿಕ ಶುದ್ಧಿಗೆ ನವರಾತ್ರಿ ಹಬ್ಬದ ಆಚರಣೆ ಸಹಾಯ ಮಾಡುತ್ತದೆ. ದೇವಿಯ ಆರಾಧನೆಯ ಸಂದರ್ಭದಲ್ಲಿ ಮಹಾಸರಸ್ವತಿ, ಮಹಾಲಕ್ಷ್ಮಿ ಹಾಗೂ ಮಹಾ ಪಾರ್ವತಿಯರನ್ನು ಪೂಜಿಸಲಾಗುತ್ತದೆ.

ಈ ಸಂದರ್ಭದಲ್ಲಿ ಶ್ರೀದೇವಿಯ ಮಹಾತ್ಮೆ (ಚಂಡೀಪಾಠ), ಸಪ್ತಶತೀಪಾಠ, ದೇವಿಭಾಗವತ ಮತ್ತು ಬ್ರಹ್ಮಾಂಡ ಪುರಾಣದಲ್ಲಿ ಬರುವ ಲಲಿತೋಪಾಖ್ಯಾನ ಮತ್ತು ಲಲಿತಾ ಸಹಸ್ರನಾಮಗಳನ್ನು ಹೇಳುವ ಪದ್ಧತಿ ಬಹಳ ದಿನಗಳಿಂದಲೂ ಇದೆ. ಈ ದಿನಗಳಲ್ಲಿ ಶ್ರೀನಿವಾಸ ಕಲ್ಯಾಣದ ಕತೆಯನ್ನು ಕೇಳುತ್ತಾರೆ.

ನನಗೆ ಬದುಕಿನಲ್ಲಿ ಶ್ರೀದೇವಿ ಆರಾಧನೆಯಿಂದ ಸಕಲವೂ ದೊರಕಿದೆ ಎಂದರೆ ತಪ್ಪಿಲ್ಲ. ಬದುಕಿನ ಕಠಿಣ ಸಂದರ್ಭದಲ್ಲೂ ಆಕೆಯೇ ನನಗೆ ಶಕ್ತಿ ಕೊಟ್ಟಿದ್ದಾಳೆ. ಆತ್ಮವಿಶ್ವಾಸದಿಂದ ಕೆಲಸ ಮಾಡಲು ಮತ್ತು ಎಲ್ಲರನು ಪ್ರೀತಿಸುತ್ತಾ ಮುನ್ನಡೆಯಲು ದೇವಿ ಕೃಪೆಯೇ ಕಾರಣವೆಂದರೆ ತಪ್ಪಿಲ್ಲ.

**▪ ನಿರೂಪಣೆ: ಎನ್.ಭಾರತಿ**

Printed and Published by **Shridevi Media Center,** Lingapura, NH 4, Sira Road, Tumakuru - 572106, Mob: 94480 82844 and
Printed at **Maruthi Printing Press,** No.90/6-1. 1st cross, Vittal Nagar West, Near Marvel Apartment, Bengaluru-560026. Editor in Chief: **Dr M R Hulinaykar**